ಐಕ್ಯರಂಗ

(ವಾರ ಪತ್ರಿಕೆ)

ಭಾರತ ಕಮ್ಯುನಿಸ್ಟ್ ಪಕ್ಷ [ಮಾರ್ಕ್ಸ್‌ವಾದಿ] ಕರ್ನಾಟಕ ರಾಜ್ಯ ಸಮಿತಿಯ ಮುಖಪತ್ರಿಕೆ

ಸಂಪುಟ 4 ಸಂಚಿಕೆ 54 ಜನವರಿ 16, 1983 ಬೆಲೆ 60 ಪೈಸೆ

ನಿಕೋಲಾಯ್ ಪೋಡ್ಗೋರ್ನಿ ನಿಧನ

ರಷ್ಯಾದ ಮಾಜೀ ಅಧ್ಯಕ್ಷ ನಿಕೊಲಾಯ್ ಪೋಡ್ಗೋರ್ನಿ ತಮ್ಮ 79ನೆಯ ವಯಸ್ಸಿನಲ್ಲಿ ನಿಧನರಾದರೆಂದು ಸುಪ್ರೀಂ ಸೋವಿಯೆತ್‌ನ ಪ್ರಿಸೀಡಿಯಂ ತಿಳಿಸಿದೆ.

ಪೋಡ್ಗೋರ್ನಿ ಅವರು 1965 ರಿಂದ 1977ರವರೆಗೆ ರಷ್ಯಾದ ಅಧ್ಯಕ್ಷರಾಗಿದ್ದರು.

ಪೋಡ್ಗೋರ್ನಿ ಅವರ ನಿಧನಕ್ಕೆ ಮಾರ್ಕ್ಸ್‌ವಾದೀ ಕಮ್ಯುನಿಸ್ಟ್ ಪಕ್ಷದ ಕರ್ನಾಟಕ ರಾಜ್ಯ ಸೆಕ್ರೆಟೇರಿಯೇಟ್ ತನ್ನ ಸಂತಾಪ ವ್ಯಕ್ತಪಡಿಸುತ್ತದೆ.

ಬೂಟಾಸಿಂಗರ ಬೂಟಾಟಿಕೆ

ಇತ್ತೀಚೆಗೆ ನಡೆದ ಕರ್ನಾಟಕ ರಾಜ್ಯದ ವಿಧಾನ ಸಭೆಯ ಚುನಾವಣೆಯಲ್ಲಿ ತಮ್ಮ ಪಕ್ಷಕ್ಕೆ 223ರ ಪೈಕಿ ಬರೇ 81 ಸ್ಥಾನ ದೊರೆತಿದ್ದರೂ ಕೂಡ ಕಾಂಗ್ರೈ ಚುನಾವಣೆ ವೀಕ್ಷಕರಾಗಿ ಬಂದಿರುವ ಬೂಟಾ ಸಿಂಗ್ ಅವರು "ಸಂಧರ್ಭ ಬಂದರೆ ಕರ್ನಾಟಕ ರಾಜ್ಯದಲ್ಲಿ ಸರ್ಕಾರ ರಚಿಸಲು ಕಾಂಗ್ರೈ ಸಿದ್ದ" ಎಂದು ಜಂಬದ ಮಾತನ್ನಾಡಿದ್ದಾರೆ. ಇದಕ್ಕಿಂತ ಹೆಚ್ಚಿನ ನಾಚಿಕೆಗೇಡಿತನ, ಕಿಡಿಗೇಡಿತನ ಮತ್ತಾವುದೂ ಇಲ್ಲ.

ಚುನಾವಣೆ ನಡೆಯುವುದಕ್ಕೆ ಮುಂಚೆ ಈ ಚುನಾವಣೆಯಲ್ಲಿ 30 ಸ್ಥಾನಗಳನ್ನಾದರೂ ಪಡೆಯಿರಿ ಎಂದು ಸವಾಲು ಹಾಕಿ, 200 ಸ್ಥಾನ ಗೆಲ್ಲುತ್ತೇನೆಂದು ಧೈರ್ಯದ ನುಡಿಯಾಡಿದ ಆಗಿನ ಮುಖ್ಯ ಮಂತ್ರಿ ಗುಂಡೂರಾಯರು ಸೋಮವಾರಪೇಟೆಯಲ್ಲಿ ಮತದಾರರಿಂದ ಮಣ್ಣುಮುಕ್ಕಿಸಿಕೊಂಡು ಮಾಜಿ ಮುಖ್ಯ ಮಂತ್ರಿಯಾಗಿ ಭ್ರಮೆ ನಿರಸನ ಮಾಡಿಕೊಂಡು ತಾನು ಮಾತ್ರ ಸೋತದ್ದಲ್ಲದೆ ತನ್ನ ಪಾರ್ಟಿಯನ್ನು ಕೂಡ ಕರ್ನಾಟಕದ ಮತದಾರರು ನಿರಾಕರಿಸಿದ್ದಾರೆಂಬ ಸತ್ಯ ಸಂಗತಿಯನ್ನು ತಿಳಿದು "ಬೇರೆಯವರ ನೆರವಿನಿಂದ ರಾಜ್ಯದಲ್ಲಿ ಸರ್ಕಾರ ರಚಿಸಲು ಕಾಂಗ್ರೈ ಪ್ರಯತ್ನಿಸುವುದಿಲ್ಲ. ತಮ್ಮ ಪಕ್ಷ ಜನತೆಯ ತೀರ್ಮಾನವನ್ನು ಗೌರವಿಸಿ ಹೊಣೆಯರಿತ ವಿರೋಧ ಪಕ್ಷವಾಗಿ ಕಾರ್ಯನಿರ್ವಹಿಸುತ್ತದೆಂದು'' ಸ್ಪಷ್ಟ ನುಡಿದಿದ್ದಾರೆ.

ಆದರೆ ಇಂದಿರಾ ಗಾಂಧಿಯ ಖಾಸ ಪ್ರತಿನಿಧಿಯಾಗಿ ಕ್ರೀಡಾ ಮಂತ್ರಿ ಬೂಟಾ ಸಿಂಗ್ ಬೆಂಗಳೂರಿಗೆ ಬಂದು ನೆಲೆಸಿದ್ದಾರೆ. "ಹಿಮಾಚಲ ಪ್ರದೇಶ, ಹರ್‍ಯಾಣಾ, ನಾಗಾಲ್ಯಾಂಡಿನಲ್ಲಿ ಯಶಸ್ವಿಯಾಗಿ ಆಟ ಆಡಿದ್ದೀಯಾ. ಕರ್ನಾಟಕದಲ್ಲೂ ಅದಕ್ಕಿಂತಲೂ ಉತ್ತಮವಾಗಿ ಆಟ ಆಡಿ ಬಾ ಮಗೂ" ಎಂದು ಅಮ್ಮಾಜಿಯವರು ಕಿಸೆ ತುಂಬ ನೋಟು ತುಂಬಿ ಬೂಟ ಸಿಂಗರನ್ನು ಬೆಂಗಳೂರಿಗೆ ಕಳುಹಿಸಿದ್ದಾರೆ. ಹಣದ ಚೀಲಗಳನ್ನು ಹೊತ್ತುಕೊಂಡೇ ಬೂಟಾ ಬೆಂಗಳೂರಿಗೆ ಬಂದಿದ್ದಾರೆಂದು ಜನತಾ ಪಕ್ಷದ ಅಧ್ಯಕ್ಷ ಬೊಮ್ಮಾಯಿಯವರು ಆರೋಪ ಮಾಡಿರುವುದು ನಿಜ ಇರಬಹುದು.

ಹುಟ್ಟು ಗುಣ ಗುಡ್ಡ ಹತ್ತಿದರೂ ಬಿಡೋದಿಲ್ಲೆಂಬ ಗಾದೆಯಿದೆ. ಜನರು ಕಲ್ಲಿನಿಂದ ಹೊಡೆದರೂ, ಮುಖಕ್ಕೆ ಸಗಣಿ ಲೇಪನ ಮಾಡಿದರೂ ಇಂದಿರಾ ಗಾಂಧಿ ಹುಟ್ಟುಗುಣ ಬಿಟ್ಟುಕೊಡುವಂತೆ ಕಾಣುವುದಿಲ್ಲ. ಹಣದ–ಅಧಿಕಾರದ ಆಮಿಷ ತೋರಿಸಿ, ಹರ್‍ಯಾಣಾ, ಹಿಮಾಚಲ ಪ್ರದೇಶ, ನಾಗಾಲ್ಯಾಂಡಿನಲ್ಲಿ ಅಲ್ಪ ಮತದ ತನ್ನ ಪಕ್ಷವನ್ನು ಬಹುಮತದ ಪಕ್ಷವನ್ನಾಗಿಸಿ ಅಧಿಕಾರಕ್ಕೆ ತಂದ ಈ ಮಹಾಮಾಯೇ ಕರ್ನಾಟಕದಲ್ಲೂ ಶಾಸಕರನ್ನು ಖರೀದಿ ಮಾಡಿ ಮತ್ತೆ ತನ್ನ ದುರಾಡಳಿತೆಯನ್ನು ಕನ್ನಡಿಗರ ಮೇಲೆ ಹೇರಲು ಕುತಂತ್ರ ನಡೆಸುತ್ತಿರುವಂತೆ ಕಂಡು ಬರುತ್ತದೆ. ಅದಕ್ಕಾಗಿಯೇ ಬೂಟಾಸಿಂಗರ ಬೆಂಗಳೂರು ಸಂದರ್ಶನ. ಚುನಾವಣಾ ಫಲಿತಾಂಶ ಹೊರಬಿದ್ದು ವಾರ ಕಳೆದರೂ ಈ ಭೂತ ಕುಮಾರ ಕೃಪಾ ಬಿಟ್ಟು ಅಲುಗಾಡುತ್ತಿಲ್ಲವಲ್ಲ. ಇವರ ಬೆಂಬಲಾರ್ಥವಾಗಿ ಕೇಂದ್ರ ಅರ್ಥ ಮಂತ್ರಿ ಪ್ರಣವ ಮುಖರ್ಜಿ ಮತ್ತು ಪಕ್ಷಾಂತರ ಪ್ರವೀಣನಾದ ಹರ್‍ಯಾಣ ಮುಖ್ಯ ಮಂತ್ರಿಯಾದ ಭಜನ್‌ಲಾಲ್ ಬೆಂಗಳೂರಿಗೆ ಬಂದು ಗುಪ್ತ ಚಟುವಟಿಕೆ ನಡೆಸುತ್ತಿದ್ದಾರೆಂಬ ದಟ್ಟ ವಾರ್ತೆ ಎಲ್ಲೆಡೆ ಹಬ್ಬಿದೆ.

35 ವರ್ಷ ಸತತವಾಗಿ ಕರ್ನಾಟಕದಲ್ಲಿ ಅಧಿಕಾರ ನಡೆಸಿ ರುಚಿಕಂಡ ಇಂದಿರಾ ಕಾಂಗ್ರೆಸ್ಸಿನ ದಿಲ್ಲಿ ಮುಖಂಡರಿಗೆ 5ನೇ ತಾರೀಕಿನಂದು ಕರ್ನಾಟಕದ ಜನತೆ ಕಾಂಗ್ರೈ ಪಕ್ಷಕ್ಕೆ ಉಂಟುಮಾಡಿದ ಮಹಾ ಸೋಲಿನ ಅರ್ಥ ತಿಳಿದಂತೆ ಕಂಡು ಬರುವುದಿಲ್ಲ. ಮನುಷ್ಯನ ರಕ್ತದ ರುಚಿ ಕಂಡ ಹುಲಿ ಹೇಗೆ ಜೀವಂತ ಮನುಷ್ಯನನ್ನು ಬೆನ್ನ ಹತ್ತುತ್ತದೋ ಅದೇ ರೀತಿಯಲ್ಲಿ ಇಂದಿರಾ ಗಾಂಧಿ ಬೆನ್ನು ಹತ್ತಿದ್ದಾರೆ. ಕನ್ನಡಿಗರು ಚೇತರಿಸಿಕೊಂಡಿದ್ದಾರೆ, ಹೊಸ ಚೈತನ್ಯ ಅವರಲ್ಲಿ ಮೂಡಿ ಬಂದಿದೆ, ಆದ್ದರಿಂದಲೇ ಯಾವ ಗೊಂದಲವಿಲ್ಲದೆ, ಯಾವ ಹಣದ ಪ್ರಭಾವಕ್ಕಾಗಲೀ, ಅಧಿಕಾರ ದರ್ಪಕ್ಕಾಗಲೀ ಕೊಚ್ಚಿಕೊಂಡು ಹೋಗದೆ, ಅತ್ಯಂತ ಶಾಂತ ರೀತಿಯಿಂದ ಜನವಿರೋಧಿ ಇಂದಿರಾ ಕಾಂಗ್ರೆಸ್ಸನ್ನೂ, ಗುಂಡೂರಾವ್ ಸರಕಾರವನ್ನೂ ಅಧಿಕಾರದಿಂದ ಕಿತ್ತೊಗೆಯುವ ಮಹಾ ಕಾರ್ಯಮಾಡಿ ತೋರಿಸಿದ್ದಾರೆ. ಇದರರ್ಥ ತಿಳಿದುಕೊಳ್ಳುವ ಶಕ್ತಿ ಇಂದಿರಾ ಗಾಂಧಿಗೆ ಇಲ್ಲದಂತಾಗಿದೆ ಹಾರ್‍ಯಾಣಾ, ಹಿಮಾಚಲ ಪ್ರದೇಶ, ನಾಗಾಲ್ಯಾಂಡಿನಲ್ಲಿ ಎಂ.ಎಲ್.ಎ.ಗಳನ್ನು ಕೊಂಡುಕೊಂಡಂತೆಯೇ ಕರ್ನಾಟಕದಲ್ಲಿ ಕೂಡ ಜನತಾ-ಕ್ರಾಂತಿರಂಗದಲ್ಲಿ ಒಡಕುಂಟುಮಾಡಿ ಸ್ವತಂತ್ರ ಅಭ್ಯರ್ಥಿಗಳನ್ನು ವಶಪಡಿಸಿಕೊಳ್ಳಬಹುದೆಂಬ ಆಮಿಷೆಯಿಂದ ಬೂಟಾಸಿಂಗ್, ಪ್ರಣವ್ ಮುಖರ್ಜಿ, ಭಜನ್‌ಲಾಲ್ ಮೊದಲಾದವರನ್ನೆಲ್ಲ ಬೆಂಗಳೂರಿಗೆ ಕಳುಹಿಸಿಕೊಟ್ಟಿದ್ದಾರೆ. ಕನ್ನಡಿಗರಿಗೆ ಎದ್ದೇಳಲು ಕಾಲಾವಕಾಶ ಹಿಡಿಯುತ್ತದೆ ನಿಜ. ಆದರೆ ಒಮ್ಮೆ ಎದ್ದರೆ ಮಾತ್ರ ತನ್ನ ಪೂರ್ಣ ಶಕ್ತಿಯನ್ನು ಪ್ರದರ್ಶಿಸಲು ಅವರು ಹಿಂದೇಟು ಹಾಕುವುದಿಲ್ಲ. ಆದ್ದರಿಂದ ಈ ಸಲ ಇಂದಿರಾ ಗಾಂಧಿಯ ಹಣಕ್ಕಾಗಲೀ, ಅಧಿಕಾರಕ್ಕಾಗಲೀ ಯಾರಾದರೂ ಬಲಿಯಾಗಿ ಸಿ ಪಿ ಐ., ಸಿ ಪಿ. ಐ. (ಎಂ) ಬೆಂಬಲದಿಂದ ಅಧಿಕಾರಕ್ಕೆ ಬಂದಿರುವ ಜನತಾ ಸರಕಾರವನ್ನು ಉರುಳಿಸಲು ಪ್ರಯತ್ನ ಮಾಡಿದರೆ ಅಂಥ ಶಾಸಕರನ್ನು ಅವನು ಎಷ್ಟು ದೊಡ್ಡ ವ್ಯಕ್ತಿಯೇ ಇರಲಿ, ಜನತೆ ಸುಮ್ಮನೆ ಬಿಡುವುದಿಲ್ಲೆಂಬ ಸ್ಪಷ್ಟ ಸಂಗತಿಯನ್ನು ಇಂದಿರಾ ಏಜಂಟರೂ, ವಿರೋಧ ಪಕ್ಷಗಳಿಂದಲೂ, ಸ್ವತಂತ್ರವಾಗಿಯೂ ಆರಿಸಿ ಬಂದಂಥ ಶಾಸಕರು ತಿಳಿದುಕೊಳ್ಳುವುದು ಅತ್ಯಗತ್ಯ.

ಜನತೆ ಸಿಟ್ಟಿಗೆದ್ದಿದ್ದಾರೆ. ತಮ್ಮ ಸಿಟ್ಟನ್ನು ಮತದಾನದ ಮೂಲಕ

(8ನೇ ಪುಟನೋಡಿ)

ಸಂಪಾದಕೀಯ

ಹೆಗಡೆ ಮಂತ್ರಿ ಮಂಡಲಕ್ಕೆ ಸ್ವಾಗತ

ಕರ್ನಾಟಕದ ರಾಜಕೀಯ ಇತಿಹಾಸದಲ್ಲಿ 1983ರ ಜನವರಿ 10 ರಂದು ಹೊಸ ಅಧ್ಯಾಯ ಪ್ರಾರಂಭವಾಯಿತು. ಜನತಾ ಪಕ್ಷದ ಪ್ರಧಾನ ಕಾರ್ಯದರ್ಶಿಯವರಾದ ರಾಮಕೃಷ್ಣ ಹೆಗಡೆಯವರ ಮುಖಂಡತ್ವದಲ್ಲಿ ಕಾಂಗ್ರೆಸ್ಸೇತರ ಮಂತ್ರಿ ಮಂಡಲ ಕರ್ನಾಟಕದಲ್ಲಿ ಅಧಿಕಾರ ಸ್ವೀಕಾರ ಮಾಡಿತು.

ಜನವರಿ 5 ರಂದು ನಡೆದ ಏಳನೆಯ ವಿಧಾನ ಸಭೆಯ ಚುನಾವಣೆಯಲ್ಲಿ ಕರ್ನಾಟಕದ ಮತದಾರರು ಭದ್ರವಾಗಿ ತಳವೂರಿದ್ದ ಕಾಂಗ್ರೆಸ್ ಪಕ್ಷವನ್ನು ಸೋಲಿಸಿ, ಅದರ ಅಧಿಕಾರವನ್ನು ಕೊನೆಗೊಳಿಸುವ ನಿರ್ಣಯ ಕೈಗೊಂಡಿತ್ತು. ಕನ್ನಡನಾಡಿನಿಂದ ಕಾಂಗ್ರೆಸ್ ದುರಾಡಳಿತೆಯನ್ನು ಮುಗಿಸಿಬಿಡುವ ಉದ್ದೇಶದಿಂದಲೇ ಜನತಾ, ಕ್ರಾಂತಿರಂಗ, ಸಿ. ಪಿ. ಐ. ಮತ್ತು ಸಿ ಪಿ ಐ. (ಎಂ) ಪಕ್ಷಗಳು ಚುನಾವಣಾ ಹೊಂದಾಣಿಕೆ ಮಾಡಿಕೊಂಡದ್ದರಿಂದ ಈ ಪಕ್ಷಗಳ ಮತ್ತು ಬಿ ಜೆ ಪಿ ಹಾಗೆಯೇ ಕೆಲವು ಸ್ವತಂತ್ರ ಶಾಸಕರ ಬೆಂಬಲದಿಂದ ಹೊಸ ಸರಕಾರ ರಚಿಸಲು ಸಾಧ್ಯವಾಗಿದೆ.

ವ್ಯಕ್ತಿ ಪ್ರಾಧಾನ್ಯತೆಯ ಪ್ರಶ್ನೆಯಿಂದಾಗಿ ಪ್ರಾರಂಭದಲ್ಲಿ ಮುಖಂಡರನ್ನು ಆರಿಸುವಾಗ ಸ್ವಲ್ಪ ಪ್ರಸವ ವೇದನೆಯಾದರೂ ಕೂಡ, ಒಮ್ಮತದಿಂದ ರಾಮಕೃಷ್ಣ ಹೆಗಡೆಯವರ ಮುಖಂಡತ್ವದಲ್ಲಿ ಹೊಸ ಸರಕಾರ ರಚಿತವಾಗಿರುವುದನ್ನು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಾರ್ಟಿ ಹೃತ್ಪೂರ್ವಕವಾಗಿ ಸ್ವಾಗತಿಸುತ್ತದೆ. ಮುಖ್ಯ ಮಂತ್ರಿ ಪದವಿ ಮೇಲೆ ಕಣ್ಣಿಟ್ಟಿದ್ದ ಬಂಗಾರಪ್ಪನವರು ಅಸಮಾಧಾನಗೊಂಡಿದ್ದರೂ, ವ್ಯಕ್ತಿಗಿಂತ ಪಕ್ಷ ಮತ್ತು ರಾಜ್ಯದಲ್ಲಿ ಸುಗಮ ಆಡಳಿತ ಸ್ಥಾಪಿಸುವುದೇ ಮಹತ್ವದ ಪ್ರಶ್ನೆಯಾಗಿರುವುದನ್ನು ಮನಗಂಡು ಯಾವ ಸಂಕೋಚವಿಲ್ಲದೆ ಮಂತ್ರಿ ಮಂಡಲದಲ್ಲಿ ಸೇರಿ ಕರ್ನಾಟಕದ ಜನತೆಯ ಆಶೋತ್ತರಗಳನ್ನು ಸಾಧ್ಯವಾದಷ್ಟು ಪೂರೈಸಲು ಸಹಕಾರಿಯಾಗುತ್ತಾರೆಂದೂ ನಾವು ಅಪೇಕ್ಷಿಸುತ್ತೇವೆ.

ರೈತರ, ಕಾರ್ಮಿಕರ, ವಿದ್ಯಾರ್ಥಿ ಯುವ ಜನರ ಹಾಗೆಯೇ ಸಾರ್ವಜನಿಕರ ನೂರಾರು ಸಮಸ್ಯೆಗಳಿವೆ. ರಾಜ್ಯದ ಬೆಳವಣಿಗೆಯತ್ತ ಗಮನ ಹರಿಸಬೇಕಾಗಿದೆ. ಸ್ವೈರ್ಯಂಡರಿ, ನಿರುದ್ಯೋಗ ಸಮಸ್ಯೆಗಳತ್ತ ತೀವ್ರ ಲಕ್ಷ್ಯ ಕೊಡಬೇಕಾಗಿದೆ. ಭ್ರಷ್ಟಾಚಾರ ಲಂಚಗುಳಿತನ, ಕಾಳಸಂತೆ, ಬೆಲೆಯೇರಿಕೆಗಳಂತ ತ್ವರಿತ ಸಮಸ್ಯೆಗಳು ಪರಿಹಾರದ ದಾರಿ ಕಾಯುತ್ತಿವೆ ಸರಕಾರಿ ಖಾತೆಗಳಲ್ಲಿಯ ದುಂದುವೆಚ್ಚ, ಕಾರ್ಯದಲ್ಲಿ ಅವ್ಯವಸ್ಥೆ, ಸ್ವಜನ ಪಕ್ಷಪಾತಗಳನ್ನು ಮುಟ್ಟುಗೋಲು ಹಾಕಬೇಕಾಗಿದೆ.

ಹೀಗೆ ಹಲವಾರು ಸಮಸ್ಯೆಗಳು ಹೆಗಡೆ ಸರಕಾರವನ್ನೆದುರಿಸುತ್ತಿವೆ. ಈ ಎಲ್ಲ ಸಮಸ್ಯೆಗಳಿಗೆ ಒಂದೇ ಸಲ ಪರಿಹಾರ ಕೊಡಿಸಬಹುದೆಂದು ಜನತೆಯೂ ಅಪೇಕ್ಷಿಸುವುದಿಲ್ಲ. ನಾವೂ ಕೂಡ ಹೇಳುವುದಿಲ್ಲ. ಆದರೆ ಹೊಸ ಸರಕಾರ ಹೊಸ ರೀತಿಯಿಂದ, ಹೊಸ ನೀತಿಯಿಂದ ಹೊಸ ಪರಿಣಾಮಗಳನ್ನು ತೋರಿಸಿಕೊಡುವ ದೃಷ್ಟಿಯಿಂದ ಕಾರ್ಯಾಚರಣೆ ಪ್ರಾರಂಭ ಮಾಡುತ್ತದೆಂದು ಅಪೇಕ್ಷಿಸುತ್ತೇವೆ.

ರಾಮಕೃಷ್ಣ ಹೆಗಡೆಯವರ ಹೊಸ ಮಂತ್ರಿ ಮಂಡಲವನ್ನು ಸಿ.ಪಿ ಐ. (ಎಂ) ಸ್ವಾಗತಿಸುತ್ತದೆ. ಜನರ ಆಶೋತ್ತರಗಳನ್ನು ಪೂರೈಸಲು ಮುಂದಾಗಲೆಂದು ಹಾರೈಸುತ್ತದೆ.

ಕೇರಳ ದುರ್ಘಟನೆ :

ಸಾರ್ವಜನಿಕ ತನಿಖೆಗೆ ಪೊಲಿಟ್ ಬ್ಯೂರೋ ಒತ್ತಾಯ

ಡಿಸೆಂಬರ್ 28 ರಂದು ಆಲೆಪ್ಪಿಯಲ್ಲಿ ಮತ್ತು ಡಿಸೆಂಬರ್ 30 ರಂದು ತಿರುವನಂತಪುರದಲ್ಲಿ ನಡೆದ ದುರ್ಘಟನೆಗಳ ಕುರಿತಾಗಿ ಸಾರ್ವಜನಿಕ ತನಿಖೆಯನ್ನು ನಡೆಸಬೇಕೆಂಬ ಕೇರಳದ ವಿರೋಧ ಪಕ್ಷಗಳ ಬೇಡಿಕೆಯನ್ನು ಸಿ. ಪಿ. ಐ. (ಎಂ)ನ ಪೊಲಿಟ್ ಬ್ಯೂರೋ ಸಂಪೂರ್ಣವಾಗಿ ಬೆಂಬಲಿಸುತ್ತದೆ. ಘಟನೆಗಳು ನಡೆದಿರುವ ಸಂಧರ್ಭಗಳಲ್ಲಿ ಸರ್ಕಾರದ ಆದೇಶದಂತೆ ಕೇರಳ ಪೋಲೀಸಿನ ಅಪರಾಧ ವಿಭಾಗವು ನಡೆಸಿದ ತನಿಖೆಯು ಸಂಪೂರ್ಣವಾಗಿ ನಿಷ್ಪ್ರಯೋಜಕವಾಗಿದೆ.

ಕೇರಳದ ಆಡಳಿತರಂಗವು ಎಲ್ಲರಿಗೂ ತಿಳಿದಿರುವಂತೆ ವಿವಿಧ ಜಾತಿ ಹಾಗೂ ಕೋಮುವಾದಿ ಪಕ್ಷಗಳನ್ನೊಳಗೊಂಡಿದೆ. ಈ ಪ್ರತಿಯೊಂದು ಪಕ್ಷಗಳೂ ಹಿಂದುಳಿದ ಜನಾಂಗಕ್ಕೆ ಮೀಸಲಾತಿ ಕುರಿತಂತೆ ಇನ್ನೂ ಅನೇಕ ಪ್ರಶ್ನೆಗಳ ಕುರಿತಾಗಿ ಘರ್ಷಣೆಯ ಸ್ಥಿತಿಯಲ್ಲಿವೆ. ಸಮ್ಮಿಶ್ರ ಸರಕಾರದಲ್ಲಿನ ತಮ್ಮ ಅಸ್ತಿತ್ವವನ್ನು ಉಪಯೋಗಿಸಿಕೊಂಡು ಒಂದು ಕಡೆ ಆರ್ ಎಸ್. ಎಸ್. ಮತ್ತು ಹಿಂದೂ ಕೋಮುವಾದಿಗಳು ಮತ್ತೊಂದು ಕಡೆ ಜಮಾತೆ ಇಸ್ಲಾಮಿ ಮತ್ತಿತರ ಇಸ್ಲಾಂ ಮೂಲಭೂತವಾದಿಗಳೂ ತಮ್ಮ ಚಟುವಟಿಕೆಗಳನ್ನು ವಿಸ್ತರಿಸಿಕೊಳುತ್ತಿತ್ತಾರೆ.

ಈ ಹಿನ್ನೆಲೆಯಲ್ಲಿ ಪೈಗಂಬರ್‌ರ ಜನ್ಮದಿನ (ನಬೀ ದಿನ)ವನ್ನು ರಾಜ್ಯಾದ್ಯಂತ ಆಚರಿಸಲಾಯಿತು. ಈ ಆಚರಣೆಯು ಒಟ್ಟಾರೆಯಾಗಿ ರಾಜ್ಯಾದ್ಯಂತ ಶಾಂತಿಯುತವಾಗಿತ್ತು. ಆದರೆ ಆಲೆಪ್ಪಿಯಲ್ಲಿ ಮೆರವಣಿಗೆಕಾರರ ಮತ್ತು ಪೋಲೀಸರ ನಡುವೆ ಘರ್ಷಣೆಯುಂಟಾಗಿ ಪೋಲೀಸರ ಗೋಲಿಬಾರ್‌ನಲ್ಲಿ ಒಬ್ಬ ವ್ಯಕ್ತಿ ಮೃತಪಟ್ಟನು.

ಆಲೆಪ್ಪಿ ಗೋಲಿಬಾರ್ ಪ್ರಕರಣವನ್ನು ಪ್ರತಿಭಟಿಸಿ ನಡೆದ ಪ್ರದರ್ಶನದಲ್ಲಿ ಎಲ್ಲಾ ಪಕ್ಷಗಳ ಪ್ರಜಾಪ್ರಭುತ್ವ ಶಕ್ತಿಗಳು ಕೂಡಿಕೊಂಡವು. ಈ ಸಂಧರ್ಭವನ್ನು ಉಪಯೋಗಿಸಿಕೊಂಡು ಆರ್. ಎಸ್. ಎಸ್. ಮತ್ತು ಇಸ್ಲಾಂ ಮೂಲಭೂತವಾದಿಗಳು ಪ್ರಚೋದನೆಯನ್ನುಂಟುಮಾಡಿದರು. ರಾಜ್ಯದ ಎಲ್ಲಾ ಭಾಗಗಳಲ್ಲೂ ಜಾತ್ಯಾತೀತ ಹಾಗೂ ಪ್ರಜಾಸತ್ತಾತ್ಮಕ ಶಕ್ತಿಗಳು ಈ ಪ್ರಚೋದಕ ಶಕ್ತಿಗಳ ಸಂಚನ್ನು ವಿಫಲಗೊಳಿಸಿದರು: ಕೇವಲ ತಿರುವನಂತಪುರದಲ್ಲಿ ಮಾತ್ರ ಅನೇಕ ಬೆಂಕಿ ಹಚ್ಚುವ ಮತ್ತು ಇತರ ಸಮಾಜ ವಿರೋಧೀ ಕೃತ್ಯಗಳನ್ನು ನಡೆಸಲು ಈ ಶಕ್ತಿಗಳಿಗೆ ಸಾಧ್ಯವಾಯಿತು.

ಈ ಎಲ್ಲಾ ಗಲಭೆಗಳೂ ಮುಖ್ಯಮಂತ್ರಿ ಮತ್ತವರ ಸಹೋದ್ಯೋಗಿಗಳ ಮೂಗಿನಡಿಯಲ್ಲೇ ನಡೆದರೂ ಕೂಡ ಪೋಲೀಸರು ಅನೇಕ ಗಂಟೆಗಳ ಕಾಲ ನಡೆದ ದುಷ್ಕರ್ಮಿಗಳ ಸ್ವೇಚ್ಛಾಚಾರಕ್ಕೆ ಅವಕಾಶ ನೀಡಿದ್ದರು. ಇದು ಇಲಾಖೆಯ ಅಧಿಕಾರಿಗಳಿಂದ ಆದ ತಪ್ಪಲ್ಲವೆಂದೂ ಆದರೆ ಸರ್ಕಾರದ ಆದೇಶದ ಪ್ರಕಾರ ನಡೆದದ್ದೆಂದು ಮುಖ್ಯಮಂತ್ರಿಯವರೇ ಒಪ್ಪಿಕೊಂಡಿದ್ದಾರೆ. ಸರ್ಕಾರವು ಈ ರೀತಿ ವರ್ತಿಸಲು ಕಾರಣವೇನೆಂಬುದನ್ನು ತಿಳಿದುಕೊಳ್ಳಲು ಜನತೆಗೆ ಎಲ್ಲಾ ಹಕ್ಕುಗಳೂ ಇವೆ.

ಉಚ್ಛ ಮಟ್ಟದ ತನಿಖಾಧಿಕಾರಿಯಿಂದ ನಡೆಸಲ್ಪಡುವ ಪೋಲೀಸ್ ತನಿಖೆಗಳೂ ಕೂಡ ಏನನ್ನೂ ಸಾಧಿಸಲಾರದು. ಎಲ್ಲಾ ವಿಭಾಗಗಳ ಜನತೆಯೂ ವಿಶ್ವಾಸ ಹೊಂದಿರುವಂತಹ ನಿಷ್ಪಕ್ಷಪಾತವಾದ ಆಯೋಗದಿಂದ ನಡೆಸಲ್ಪಡುವ ಸಾರ್ವಜನಿಕ ತನಿಖೆಯಿಂದ ಮಾತ್ರ ಪ್ರಯೋಜನವಾಗುತ್ತದೆ.

ವಿರೋಧ ಪಕ್ಷಗಳ ಎಡ-ಪ್ರಜಾಸತ್ತಾತ್ಮಕರಂಗವು ಮಾಡಿರುವ ಈ ಬೇಡಿಕೆಯನ್ನು ಸರ್ಕಾರವು ತಿರಸ್ಕರಿಸಲು ಸಾಧ್ಯವಾಗುವುದಿಲ್ಲ. ಈ ಪ್ರಕರಣದಲ್ಲಿ ಸಂಬಂಧಪಟ್ಟ ಮಂತ್ರಿಗಳು ಮತ್ತು ಹಿಂದೂ ಮತ್ತು ಮುಸ್ಲಿಂ ಕೋಮುವಾದಿಗಳ ನಡುವಿನ ಸಂಬಂಧಗಳನ್ನು ತನಿಖೆಯು ಬಯಲಿಗೆಳೆಯಬಹುದೆಂಬ ಭೀತಿ ಸರಕಾರಕ್ಕೆ ಇಲ್ಲದಿದ್ದರೆ ವಿರೋಧ ಪಕ್ಷಗಳ ಬೇಡಿಕೆಯನ್ನು ನಿರಾಕರಿಸಲು ಸಾಧ್ಯವಿಲ್ಲ.

ಕೇರಳದ ಮತ್ತು ಹೊರಗಿನ ಪ್ರಜಾಸತ್ತಾತ್ಮಕ ಸಾರ್ವಜನಿಕ ಅಭಿಪ್ರಾಯವು ಬೇಡಿಕೆಯನ್ನು ಬಲಿಷ್ಠಗೊಳಿಸುವುದೆಂದು ಪೊಲಿಟ್‌ಬ್ಯೂರೋ ಆಶಿಸುತ್ತದೆ.

ಹಿಂದೂ ಮತ್ತು ಮುಸ್ಲಿಂ ಕೋಮುವಾದಿಗಳಿಗೆ ಸಮ್ಮಿಶ್ರ ಸರ್ಕಾರವು ನೀಡುತ್ತಿರುವ ಉತ್ತೇಜನದಿಂದ ಉಂಟಾಗುವ ಅಪಾಯಗಳನ್ನು ಕಂಡುಕೊಳ್ಳಬೇಕೆಂದು ಪೊಲಿಟ್‌ಬ್ಯೂರೋ ತನ್ನ ಪಕ್ಷದ ಸದಸ್ಯರಿಗೆ, ಸ್ನೇಹಿತರಿಗೆ ಮತ್ತು ಕೇರಳದ ಎಡ ಪ್ರಜಾಸತ್ತಾತ್ಮಕ ಪಕ್ಷಗಳಿಗೆ ಹಾಗೂ ಆಡಳಿತ ಪಕ್ಷಗಳಲ್ಲಿರುವ ಪ್ರಜಾಸತ್ತಾತ್ಮಕ, ಜಾತ್ಯಾತೀತ ಶಕ್ತಿಗಳಿಗೆ ವಿನಂತಿಸುತ್ತದೆ.

●

ಜನವರಿ ೧೮ ರಂದು ಕೇರಳ ಬಂದ್‌ಗೆ ಕರೆ

ಸಿ. ಪಿ. ಐ. (ಎಂ), ಸಿ.ಪಿ.ಐ., ಕಾಂಗ್ರೆಸ್ (ಎಸ್), ಅಖಿಲ ಭಾರತ ಮುಸ್ಲಿಂ ಲೀಗ್, ಆರ್. ಎಸ್. ಪಿ. ಮತ್ತಿತರ ವಿರೋಧ ಪಕ್ಷಗಳು ಬೆಲೆಯೇರಿಕೆ, ಭ್ರಷ್ಟಾಚಾರ, ಪೋಲೀಸ್ ದೌರ್ಜನ್ಯ, ರೈತರ ಬೆಳೆಗೆ ನ್ಯಾಯ ಬೆಲೆ ಸಿಗಬೇಕು, ಬಸ್ ದರ ಇಳಿಸಬೇಕು, ವಿದ್ಯುಚ್ಛಕ್ತಿ ದರ ಇಳಿಸಬೇಕು ಮುಂತಾದ ಬೇಡಿಕೆಗಳಿಗೆ ಒತ್ತಾಯಿಸಿ ಜನವರಿ 18 ರಂದು ರಾಜ್ಯಾದ್ಯಂತ ಒಂದು ದಿನದ ಬಂದ್ ಆಚರಿಸಬೇಕೆಂದು ಕರೆ ನೀಡಿವೆ.

ಕರ್ನಾಟಕದಲ್ಲಿ ಪ್ರಥಮ ಕಾಂಗ್ರೆಸ್ಸೇತರ ಸರ್ಕಾರ ಅಧಿಕಾರಕ್ಕೆ

ಕರ್ನಾಟಕದಲ್ಲಿ ಪ್ರಥಮ ಬಾರಿಗೆ ಕಾಂಗ್ರೆಸ್ಸೇತರ ಸರ್ಕಾರ ಅಸ್ತಿತ್ವಕ್ಕೆ ಬಂದಿದೆ.

10–1–83 ರಂದು ರಾಜಭವನದಲ್ಲಿ ನಡೆದ ಸಮಾರಂಭದಲ್ಲಿ ಜನತಾರಂಗ ಸರ್ಕಾರ ಅಧಿಕಾರ ಸ್ವೀಕರಿಸಿತು. ಮುಖ್ಯ ಮಂತ್ರಿಯಾಗಿ ಶ್ರೀ ರಾಮಕೃಷ್ಣ ಹೆಗ್ಗಡೆ ಪ್ರಮಾಣ ವಚನ ಸ್ವೀಕರಿಸಿದರು. ಹಣಕಾಸು ಮತ್ತು ಯೋಜನಾ ಇಲಾಖೆಯನ್ನು ಅವರೇ ನೋಡಿಕೊಳ್ಳಲಿದ್ದಾರೆ. ಶ್ರೀ ಎಸ್. ಆರ್. ಬೊಮ್ಮಾಯಿ ಅವರು ವಾಣಿಜ್ಯ ಹಾಗೂ ಕೈಗಾರಿಕಾ ಖಾತೆಯನ್ನೂ, ಶ್ರೀ ಅಬ್ದುಲ್ ನಜೀರ್ ಸಾಬ್ ಅವರು ಪಂಚಾಯತ್ ರಾಜ್ಯ ಮತ್ತು ಗ್ರಾಮೀಣ ಅಭಿವೃದ್ಧಿ ಖಾತೆಯನ್ನು, ಶ್ರೀ ಬಿ. ರಾಚಯ್ಯನವರು ಶಿಕ್ಷಣ ಖಾತೆಯನ್ನು, ಶ್ರೀ ವಿ.ಎಲ್.ಪಾಟೀಲ್ ಅವರು ಸಾರಿಗೆ ಮತ್ತು ಕಾರ್ಮಿಕ ಖಾತೆಯನ್ನು, ಶ್ರೀ ಎ. ಲಕ್ಷ್ಮೀಸಾಗರ್ ಅವರು ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಖಾತೆಯನ್ನು ಮತ್ತು ಶ್ರೀಮತಿ ಚಂದ್ರಪ್ರಭಾ ಅರಸ್ ಅವರು ಸಮಾಜ ಕಲ್ಯಾಣ ಮತ್ತು ಅಬ್ಕಾರಿ ಖಾತೆಯನ್ನು ವಹಿಸಿಕೊಂಡಿದ್ದಾರೆ.

●

ರಾಜಸ್ಥಾನ್ ಡಿ.ವೈ.ಎಫ್.ಐ. ಸಮ್ಮೇಳನ

ಭಾರತ ಪ್ರಜಾಸತ್ತಾತ್ಮಕ ಯುವಜನ ಫೆಡರೇಶನ್ನಿನ ಎರಡನೇ ರಾಜ್ಯ ಸಮ್ಮೇಳನ ಡಿಸೆಂಬರ್ 25 ಮತ್ತು 26 ರಂದು ರಾಜಸ್ಥಾನದ ಚುರು ಜಿಲ್ಲೆಯ ರಾಜಘರ್‌ನಲ್ಲಿ ನಡೆಯಿತು. 9200 ಸದಸ್ಯರನ್ನು ಪ್ರತಿನಿಧಿಸಿದ 216 ಪ್ರತಿನಿಧಿಗಳೂ ಮತ್ತು ವೀಕ್ಷಕರೂ 13 ಜಿಲ್ಲೆಗಳಿಂದ ಆಗಮಿಸಿದ್ದರು.

ಪ್ರತಿನಿಧಿಗಳಲ್ಲಿ 80 ಮಂದಿ ಕಾರ್ಮಿಕ ವರ್ಗದಿಂದಲೂ, 46 ಮಂದಿ ರೈತ, ಕೃಷಿ ಕೂಲಿಕಾರ ವರ್ಗದಿಂದಲೂ ಮತ್ತು 60 ಮಂದಿ ಮಧ್ಯಮ ವರ್ಗದಿಂದಲೂ ಬಂದವರಾಗಿದ್ದರು.

ಸಮ್ಮೇಳನದ ಸ್ಥಳಕ್ಕೆ ಗೌತಮ್ ದತ್ತರ ಹೆಸರನ್ನಿಡಲಾಗಿತ್ತು. ಡಿ.ವೈ.ಎಫ್.ಐ.ನ ತ್ರಿಪುರಾ ರಾಜ್ಯ ಸಮಿತಿ ಸದಸ್ಯರೂ, ವಿಧಾನ ಸಭಾ ಸದಸ್ಯರೂ ಆಗಿದ್ದ ಕಾಂ| ಗೌತಮ್ ದತ್ತ ಅವರನ್ನು 1981ರ ಜೂನ್‌ನಲ್ಲಿ ಅಮ್ರ ಬಂಗಾಲಿ ಗೂಂಡಾಗಳು ಕೊಲೆ ಮಾಡಿದ್ದರು.

ಡಿ. ವೈ. ಎಫ್. ಐ ನ ಖಜಾಂಚಿ ಕಾಂ| ಸುನೀತ್ ಚೋಪ್ರಾ ಅವರಿಂದ ಧ್ವಜಾರೋಹಣವಾದ ನಂತರ ಕಾಂ| ಹನನ್ ಮುಲ್ಲಾ ನೇತೃತ್ವದಲ್ಲಿ ಸಭಿಕರು ಹುತಾತ್ಮರಿಗೆ ಶ್ರದ್ಧಾಂಜಲಿ ಅರ್ಪಿಸಿದರು.

ಪ್ರಸಿದ್ಧ ಸ್ವಾತಂತ್ರ್ಯ ಹೋರಾಟಗಾರರೂ ಸ್ವಾಗತ ಸಮಿತಿ ಸದಸ್ಯರೂ ಆದ ಶ್ರೀ ಮೋಹರ್ ಸಿಂಗ್ ಅವರು ಪ್ರತಿನಿಧಿಗಳನ್ನು ಸ್ವಾಗತಿಸುತ್ತಾ ರೈತರು ಮತ್ತು ಯುವಕರು ಜಹಗೀರುದಾರರ ವಿರುದ್ಧ ನಡೆಸಿದ ಧೀರ್ಘ ಹಾಗೂ ಧೀರ ಹೋರಾಟವನ್ನು ನೆನಪಿಗೆ ತಂದರು: ಇನ್ನೂ ಸಾಧಿಸದೆ ಉಳಿದಿರುವ ಪ್ರಜಾಪ್ರಭುತ್ವ ಕರ್ತವ್ಯಗಳನ್ನು ನೆರವೇರಿಸಲು ಇನ್ನೂ ಹೆಚ್ಚಿನ ಸಂಖ್ಯೆಯ ಯುವ ಜನಾಂಗ ಮುಂದೆ ಬರುವರೆಂಬ ಆಶೆಯನ್ನು ವ್ಯಕ್ತಪಡಿಸಿದರು.

ಅಧಿವೇಶನವನ್ನು ಉದ್ಘಾಟಿಸಿದ ಕಾಂ| ಹನನ್‌ಮುಲ್ಲಾರವರು ದೇಶಾದ್ಯಂತ ಶೀಘ್ರವಾಗಿ ಬೆಳೆಯ ತೊಡಗಿರುವ ಪ್ರಜಾಪ್ರಭುತ್ವ ಶಕ್ತಿಗಳು ಅದರಲ್ಲಿ ಯುವ ಜನವರ ಕ್ರಿಯಾಶೀಲ ಪಾತ್ರವನ್ನು ಕುರಿತು ವಿವರಿಸಿದರು

ಸಮ್ಮೇಳನದಲ್ಲಿ ಸಂಘಟನೆಯ ಕುರಿತಾದ ಸುಧೀರ್ಘ ಹಾಗೂ ಜೀವಂತ ಚರ್ಚೆ ನಡೆಯಿತು. 16 ಅಂಶಗಳ ಕಾರ್ಯಕ್ರಮವನ್ನು ಸಮ್ಮೇಳನದಲ್ಲಿ ಅಂಗೀಕರಿಸಲಾಯಿತು.

ಸಮ್ಮೇಳನವು 27 ಮಂದಿಯ ರಾಜ್ಯ ಕಾರ್ಯಕಾರೀ ಸಮಿತಿಯನ್ನು ಆಯ್ಕೆ ಮಾಡಿತು. ಅಧ್ಯಕ್ಷರಾಗಿ ಕಾಂ| ಸುರೇಶ್ ವ್ಯಾಸ್, ಕಾರ್ಯದರ್ಶಿಯಾಗಿ ಕಾಂ| ಉಮರ್‌ರಾವ್ ಸಿಂಗ್ ಮುಂತಾದವರು ಆಯ್ಕೆಯಾಗಿದ್ದಾರೆ.

ಸಮ್ಮೇಳನದ ಕೊನೆಯಲ್ಲಿ 10,000 ಮಂದಿಯ ಬೃಹತ್ ಮೆರವಣಿಗೆ ನಡೆಯಿತು. ಬಹಿರಂಗ ಸಭೆಯನ್ನುದ್ದೇಶಿಸಿ ಸಿ. ಪಿ. ಐ. (ಎಂ)ನ ಪೊಲಿಟ್ ಬ್ಯೂರೋ ಸದಸ್ಯರಾದ ಕಾಂ| ಸಮರ್ ಮುಖರ್ಜಿ ಮಾತನಾಡಿದರು.

○

ತ್ರಿಪುರಾ ಮಂತ್ರಿ ಮಂಡಲ ಅಧಿಕಾರಕ್ಕೆ

ಸಿ. ಪಿ. ಐ. (ಎಂ) ನೇತೃತ್ವದ ಎಡರಂಗದ ಎರಡನೆಯ ಮಂತ್ರಿ ಮಂಡಲವು ಜನವರಿ 11 ರಂದು ರಾಜಧಾನಿ ಅಗರ್ತಲಾದಲ್ಲಿ ಅಧಿಕಾರ ವಹಿಸಿಕೊಂಡಿತು. ವಿಧಾನ ಸಭೆಯ ಎಡರಂಗದ ನಾಯಕರಾದ ಕಾಂ| ನೃಪೇನ್ ಚಕ್ರವರ್ತಿ ಹಾಗೂ ಇತರ ಹನ್ನೊಂದು ಮಂದಿ ಸಹಚರರು ರಾಜ್ಯಪಾಲ ಎಸ್. ಎಂ. ಹೆಚ್. ಬರ್ನೆ ಅವರ ಸಮ್ಮುಖದಲ್ಲಿ ಪ್ರಮಾಣವಚನ ಸ್ವೀಕರಿಸಿದರು.

ಮುಖ್ಯ ಮಂತ್ರಿಯಾಗಿ ಆಯ್ಕೆಯಾಗಿರುವ ಕಾಂ| ನೃಪೇನ್ ಚಕ್ರವರ್ತಿ ಅವರು ಗೃಹಖಾತೆ, ಹಣಕಾಸು ಮತ್ತು ರಾಜಕೀಯ ಆಡಳಿತ ಖಾತೆಗಳನ್ನು ತಾವೇ ಉಳಿಸಿಕೊಂಡಿದ್ದಾರೆ. ಮೊಟ್ಟಮೊದಲ ಬಾರಿಗೆ ರಾಜ್ಯದಲ್ಲಿ ಉಪಮುಖ್ಯ ಮಂತ್ರಿ ಸ್ಥಾನವನ್ನು ಸೃಷ್ಟಿಸಲಾಗಿದ್ದು ಅದನ್ನು ಕಾಂ| ದಶರಥ ದೇಬ್ ಅವರು ವಹಿಸಿಕೊಂಡಿದ್ದಾರೆ. ಆದಿವಾಸಿಗಳು ಮತ್ತು ಬಂಗಾಳಿಗಳ ನಡುವೆ ಸಮಾನತೆಯನ್ನು ಉಂಟು ಮಾಡಲು ಈ ಪ್ರಯತ್ನ. ಕಾಂ| ದಶರಥ ದೇಬ್ ಅವರು ಶಿಕ್ಷಣ ಹಾಗೂ ಗುಡ್ಡಗಾಡು ಜನಾಂಗಗಳ ಅಭಿವೃದ್ಧಿ ಖಾತೆಯನ್ನು ಹೊಂದಿದ್ದಾರೆ.

60 ಸದಸ್ಯರಿರುವ ವಿಧಾನ ಸಭೆಯಲ್ಲಿ ಎಡರಂಗವು 39 ಸ್ಥಾನಗಳನ್ನು ಪಡೆದಿದೆ.

ಯಾವುದೇ ಸರಕಾರ ಎರಡನೇ ಅವಧಿಗೆ ಅಧಿಕಾರಕ್ಕೆ ಬಂದಿರುವುದು ಇದೇ ಪ್ರಥಮ.

ಪ್ರಮಾಣವಚನ ಸ್ವೀಕಾರದ ಸಮಾರಂಭವನ್ನು ವೀಕ್ಷಿಸಲು ಅನುಕೂಲವಾಗುವಂತೆ ಮಾಡಲು ಜಾರಿಯಲ್ಲಿದ್ದ ನಿಷೇಧಾಜ್ಞೆಯನ್ನು ಸಡಿಲಿಸಲಾಗಿತ್ತು.

●

ಇಂದಿರಾ ಭದ್ರಕೋಟೆಗಳು ಕುಸಿದು ಬಿದ್ದಿವೆ

–ಎನ್. ಕೆ. ಉಪಾಧ್ಯಾಯ

ಜನವರಿ 5 ರಂದು ನಡೆದ ಕರ್ನಾಟಕ–ಆಂಧ್ರ ಚುನಾವಣೆಗಳಲ್ಲಿ ಇಂದಿರಾ ಗಾಂಧಿಯ ಸವಾಲನ್ನು ಕರ್ನಾಟಕ–ಆಂಧ್ರದ ಜನತೆ ಆದರದಿಂದ ಸ್ವಾಗತಿಸಿದ್ದಾರೆ, ಇಂದಿರಾ ಗಾಂಧಿಯ ಏಕವ್ಯಕ್ತಿ ಸರ್ವಾಧಿಕಾರಕ್ಕೆ ದಕ್ಕಲಾರದ ಧಕ್ಕೆ ಕೊಟ್ಟಿದ್ದಾರೆ. ಆಂಧ್ರ-ಕರ್ನಾಟಕದ ಜನತೆ ತನ್ನ ದತ್ತಕ ಪುತ್ರರು, ಎಂದೆಂದಿಗೂ ತಮ್ಮನ್ನಗಲಿ ಹೋಗಲು ಶಕ್ಯವಿಲ್ಲೆಂದು ಅಭಿಮಾನದಿಂದ, ಆತ್ಮವಿಶ್ವಾಸದಿಂದ, ಹೆಮ್ಮೆಯ ನುಡಿಯನ್ನು ಬಿತ್ತರಿಸುತ್ತಿದ್ದ ಇಂದಿರಾ ಗಾಂಧಿಗೆ, ಈ ಎರಡು ರಾಜ್ಯಗಳ ಜನತೆ ಸರಿಯಾದ ಉತ್ತರ ನೀಡಿದ್ದಾರೆ. ಪ್ರಜಾಪ್ರಭುತ್ವದ ವಚನಗಳನ್ನು ನುಡಿಯುತ್ತ ಸರ್ವಾಧಿಕಾರಿ ನೀತಿಯನ್ನನುಸರಿಸುವುದು ಸರಿಯಲ್ಲ, ಬಡವರ ಉದ್ಧಾರ ಮಾಡುತ್ತೇವೆಂದು ಹೇಳಿ, ಟಾಟಾ–ಭಿರ್ಲಾರ ಲಾಭ ಹೆಚ್ಚಿಸುವುದಕ್ಕೆ ಅವಕಾಶಮಾಡಿ ಕೊಡುವುದು ಯೋಗ್ಯವಲ್ಲ, ಹೆಚ್ಚು ಉತ್ಪಾದಿಸಬೇಕೆಂದು ಹೇಳಿ ರೈತ–ಕಾರ್ಮಿಕರ ಮೇಲೆ ದಬ್ಬಾಳಿಕೆ ಮಾಡುವುದು ನ್ಯಾಯವಲ್ಲ, ನಾಗರಿಕ ಹಕ್ಕುಗಳನ್ನು ಮೊಟಕುಗೊಳಿಸುವುದಾಗಲೀ, ಛಿದ್ರಕಾರಿ ಶಕ್ತಿಗಳೊಡನೆ ಸೇರಿಕೊಳ್ಳುವುದಾಗಲೀ ದೇಶದ ಅಭಿವೃದ್ಧಿಗೆ ಮಾರಕವೆಂದು ಹೇಳಿ ಇಂದಿರಾ ಗಾಂಧಿಯ ಇಂಥ ನೀತಿ ದಕ್ಕದೆಂದು ಮತದಾರರು ಸ್ಪಷ್ಟ ಅಭಿಮತ ನೀಡಿದ್ದಾರೆ. ಇಡೀ ದೇಶದಲ್ಲಿ ಅದರಲ್ಲೂ ದಕ್ಷಿಣದ ಈ ಎರಡು ರಾಜ್ಯಗಳಲ್ಲಿ ಎದ್ದು ಕಾಣುತ್ತಿರುವ ರಾಜಕೀಯ ಬದಲಾವಣೆಯನ್ನು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಾರ್ಟಿ ಅತ್ಯಾನಂದದಿಂದ ಸ್ವಾಗತಿಸುತ್ತದೆ.

ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಾರ್ಟಿಯ ನಿಲುಮೆ

ಜನವರಿ 5 ರಂದು ನಡೆಯುವ ಚುನಾವಣೆಯಲ್ಲಿ ಕರ್ನಾಟಕ ಹಾಗೂ ಆಂಧ್ರ ಪ್ರದೇಶದಲ್ಲಿ ಆಳುವ ಕಾಂಗ್ರೆಸ್ ಪಕ್ಷ ಭಾರೀ ಸೋಲನ್ನನುಭವಿಸುವಂತೆ ಮಾಡಬೇಕೆಂದು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಾರ್ಟಿಯ ಪಾಲಿಟ್ ಬ್ಯೂರೋ ಈ ಎರಡು ರಾಜ್ಯಗಳ ಮತದಾರರನ್ನು ವಿನಂತಿಸಿಕೊಂಡಿತ್ತು. "ಜನವರಿ 5 ರಂದು ನಡೆಯುವ ಚುನಾವಣೆ ಸರ್ವಾಧಿಕಾರಿ ಶಕ್ತಿಗಳಿಗೆ ಅತ್ಯಂತ ಪ್ರಬಲವಾದ ಪ್ರತಿಭಟನೆ ವ್ಯಕ್ತಪಡಿಸಲು ಹಾಗೂ ಸಂಸದೀಯ ಪ್ರಜಾಪ್ರಭುತ್ವ ಮತ್ತು ಜನತೆಯ ಪ್ರಜಾಸತ್ತಾತ್ಮಕ ಹಕ್ಕುಗಳ ರಕ್ಷಣೆಗಾಗಿ ದೃಢ ಸಂಕಲ್ಪ ಕೈಗೊಳ್ಳಲು ಅವಕಾಶ ಕಲ್ಪಿಸಿಕೊಟ್ಟಿದೆ. ಈ ಬಹು ಮುಖ್ಯವಾದ ಉದ್ದೇಶ ಸಾಧನೆಯಾಗುವಂತೆ ತಮ್ಮ ಮತ ಚಲಾಯಿಸಬೇಕೆಂದು" ಪಾಲಿಟ್ ಬ್ಯೂರೋ ವಿನಂತಿ ಮಾಡಿಕೊಂಡಿತ್ತು.

"ಕರ್ನಾಟಕ ರಾಜ್ಯದಲ್ಲಿ ಎಡ ಶಕ್ತಿಗಳು ಇದುವರೆಗೆ ದುರ್ಬಲವಾಗಿದ್ದರೂ ಇತ್ತೀಚಿನ ದಿನಗಳಲ್ಲಿ ನಡೆದ ರೈತರ, ಕಾರ್ಮಿಕರ ಹೋರಾಟಗಳಲ್ಲಿ ಈ ಎಡ ಶಕ್ತಿಗಳು ಮುಂಚೂಣಿಯಲ್ಲಿದ್ದವು. ರಾಜ್ಯದಲ್ಲಿ ಎಲ್ಲ ಎಡ ಶಕ್ತಿಗಳನ್ನು ಒಟ್ಟು ಸೇರಿಸಿ ಕರ್ನಾಟಕದಲ್ಲಿ ಇದರ ಬಲ ಹೆಚ್ಚಿಸಲು ಹಾಗೂ ಕಾಂಗ್ರೆಸ್ ಬಲ ಕುಗ್ಗಿಸಲು ಸಿ. ಪಿ. ಐ. (ಎಂ) ಮತ್ತು ಸಿ.ಪಿ.ಐ. ಒಟ್ಟಾಗಿ ಈ ಚುನಾವಣೆಯಲ್ಲಿ ಸ್ಪರ್ಧಿಸಿ, ಜನತಾ, ಕ್ರಾಂತಿರಂಗಗಳೊಡನೆ ಒಪ್ಪಂದ ಮಾಡಿಕೊಂಡು ಕಾಂಗ್ರೆಸ್‌ಗೆ ಸಾಧ್ಯವಾದಷ್ಟು ದೊಡ್ಡ ಪ್ರಮಾಣದ ಸೋಲುಣ್ಣಿಸಬೇಕಾದ ಅಗತ್ಯವನ್ನೂ ಮತದಾರರು ಮನಗಾಣುತ್ತಾರೆಂದು" ಪಾಲಿಟ್ ಬ್ಯೂರೋ ಆಶಿಸಿತ್ತು.

"ಗುಂಡೂರಾಯರು, ಕಾಂಗ್ರೆಸ್ ಮುಖಂಡರೂ ಈ ರೀತಿ ಪೋಲೀಸ್ ಸಹಾಯದಿಂದ ಅಭ್ಯರ್ಥಿಗಳನ್ನು ಆರಿಸಿ, ಚುನಾವಣಾ ಪ್ರಚಾರ ಪ್ರಾರಂಭಿಸಿರುವಾಗ, ಜನತಾ ಪಕ್ಷ, ಕ್ರಾಂತಿರಂಗ, ಸಿ. ಪಿ. ಐ. ಮತ್ತು ಸಿ. ಪಿ. ಐ. (ಎಂ) ಕಳೆದ ಮೂರು ವರ್ಷಗಳ ಗುಂಡೂರಾವ್ ಸರಕಾರದ ದಬ್ಬಾಳಿಕೆ, ಪೊಳ್ಳು ಆಶ್ವಾಸನೆ, ಗೋಳೀಬಾರುಗಳಿಂದ ಪಾಠ ಕಲಿತು, ಇವುಗಳ ವಿರುದ್ಧ ಜನತೆಯ ಐಕ್ಯ ಹೋರಾಟ ನಡೆಸಿ ಅನುಭವ ಪಡೆದು ಇಂಥ ಸರಕಾರವನ್ನು ಅಧಿಕಾರದಿಂದ ಇಳಿಸಬೇಕು, ಕಾಂಗ್ರೆಸ್ಸನ್ನು ಸೋಲಿಸಬೇಕೆಂಬ ದೃಢ ನಿರ್ಧಾರದಿಂದ ಒಗ್ಗಟ್ಟಾಗಿ ಚುನಾವಣೆ ನಡೆಸಬೇಕೆಂದು ನಿರ್ಧರಿಸಿರುವುದು, ಅತ್ಯಂತ ಸ್ವಾಗತಾರ್ಹ. ಕರ್ನಾಟಕದ ಮತದಾರರೂ ವಿರೋಧ ಪಕ್ಷಗಳ ಇಂಗಿತವನ್ನೂ, ಅವರು ಕೈಗೊಂಡಿರುವ ಪ್ರಯತ್ನವನ್ನೂ ಅವರ ದೃಢ ನಿರ್ಧಾರವನ್ನೂ ಮನದಟ್ಟುಮಾಡಿಕೊಂಡು ಸಿ.ಪಿ.ಐ. (ಎಂ)., ಸಿ.ಪಿ.ಐ., ಜನತಾ, ಕ್ರಾಂತಿರಂಗದ ಉಮೇದುವಾರರನ್ನು ಬಹುಮತದಿಂದ ಆರಿಸಿ ತರಬೇಕೆಂದು" 19-12-82ರ ಐಕ್ಯರಂಗ ವಿನಂತಿ ಮಾಡಿಕೊಂಡಿತ್ತು.

"ಭ್ರಷ್ಟ ಜನವಿರೋಧಿ ಸರಕಾರದ ವಿರುದ್ಧ ಮತ ನೀಡಲು ಅವಕಾಶ ಮಾಡಿಕೊಡುವ ಸಂದರ್ಭವನ್ನು ವಿರೋಧ ಪಕ್ಷಗಳು [ಬಿ. ಜೆ. ಪಿ. ಬಿಟ್ಟು] ಮಾಡಿಕೊಟ್ಟಿವೆ ಎಂಬುದು ಹರ್ಷದಾಯಕ ಸಂಗತಿ. ರಾಜ್ಯದ ಚುನಾವಣೆಯಲ್ಲಿ ಈ ರೀತಿ ಉಂಟಾಗಿರುವ ಒಳ್ಳೆಯ ಅವಕಾಶವನ್ನು ಸರಿಯಾಗಿ ಸದುಪಯೋಗಮಾಡಿಕೊಳ್ಳುವ ಜವಾಬ್ದಾರಿ ಈಗ ಮತದಾರದ್ದು. ಈ ಜವಾಬ್ದಾರಿಯನ್ನು ಮತದಾರರು ಹೊರುತ್ತಾರೆಂದು ಅಪೇಕ್ಷೆ ವ್ಯಕ್ತ ಮಾಡಿದ್ದು ತಾ|| 12-12-82ರ ಐಕ್ಯರಂಗ ವಾರಪತ್ರಿಕೆ.

"ನಮ್ಮ ರಾಜ್ಯದ ಮಂತ್ರಿ ಗುಂಡೂರಾಯರು ತಮ್ಮ ಮೂರು ವರ್ಷಗಳ ಆಡಳಿತೆಯಲ್ಲಿ ಹೋರಾಡುವ ಜನತೆಯ ಮೇಲೆ ನಿಸ್ಸಂಕೋಚವಾಗಿ ಗುಂಡು ಹಾರಿಸಿದ್ದಾರೆ. ಇಂದಿರಾ ಗಾಂಧಿ ಕೊಟ್ಟಿರುವ ಸರ್ವಾಧಿಕಾರಿ ಗಧೆಯನ್ನೇ ಉಪಯೋಗಿಸಿ ಆಡಳಿತೆ ನಡೆಸಿದ್ದಾರೆ. ...ಅಧಿಕಾರದ ಅಮಲೇರಿ ಅಧಿಕಾರವನ್ನು ಮನಬಂದಂತೆ ಉಪಯೋಗಿಸುವ ಪ್ರವೃತ್ತಿಯನ್ನು ಚುನಾವಣೆಯಲ್ಲಿ ಚಲಾಯಿಸಿ ಜನತೆಗೆ ಸವಾಲೊಡ್ಡಿದ್ದಾರೆ ...ಕಳೆದ ಹಲವಾರು ವರ್ಷಗಳಿಂದ ಧೀರ ಹೋರಾಟ ನಡೆಸುತ್ತ ಬಂದ ಕರ್ನಾಟಕದ ಜನತೆ ಗುಂಡೂರಾಯರ ಸವಾಲನ್ನು ಸ್ವೀಕರಿಸಿ ಆ ಸವಾಲಿಗೆ ಜನವರಿ 5 ರಂದು ಸರಿಯಾದ ಉತ್ತರ ಕೊಡುತ್ತಾರೆಂದು ಅಪೇಕ್ಷಿಸುತ್ತೇವೆ. ನರಗುಂದ-ನವಲಗುಂದಗಳಲ್ಲಿ ರೈತರ ಮೇಲಾದ ಅಮಾನುಷ ದಬ್ಬಾಳಿಕೆ, ಗೋಳೀಬಾರನ್ನು ಖಂಡಿಸಿ, ರೈತರಿಗೆ ರಕ್ಷಣೆ ನೀಡಲು ಇಡೀ ರಾಜ್ಯದ ಜನತೆ ಎದ್ದು ನಿಂತಿತ್ತು. ಬೆಲೆಯೇರಿಕೆ, ಕೃಷಿ ಕಾರ್ಮಿಕರಿಗೆ ಕನಿಷ್ಟ ಕೂಲಿ, ಮೀಸಾ, ಎಸ್ಮಾಗಳ ರದ್ದತಿ, ರೈತರ ಬೆಲೆಗಳಿಗೆ ನ್ಯಾಯಬೆಲೆ, ಕಾರ್ಮಿಕರ ಹಕ್ಕುಗಳಿಗಾಗಿ ಕರ್ನಾಟಕಾದ್ಯಂತ ಬಂದ್, ಮುಷ್ಕರಗಳನ್ನು ನಡೆಸಿದ ಕೆಚ್ಚೆದೆಯ ಕನ್ನಡಿಗರು ಮಂತ್ರಿ ದ್ವಯರಾದ ಸಿ. ಎಂ. ಇಬ್ರಾಹಿಂ, ರೇಣುಕಾ ರಾಜೇಂದ್ರನ್ ಇವರನ್ನು ಅಧಿಕಾರದ ಕುರ್ಚಿಯಿಂದ ಕೆಳಗಿಳಿಸಿದ ಧೀರ ಜನತೆ. ಗುಂಡೂರಾಯರ ಸೊಕ್ಕಿಗೆ ಅವರ ಪಕ್ಷ ಇಂದಿರಾ ಪಕ್ಷವನ್ನು ಸೋಲಿಸಿ ಜವಾಬು ಕೊಡಲಿ" (26-12-82ರ ಐಕ್ಯರಂಗದ ಸಂಪಾದಕೀಯ.)

ಹೀಗೆ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಾರ್ಟಿಯ ಪೊಲಿಟ್ ಬ್ಯೂರೋ ಹಾಗೂ ಕರ್ನಾಟಕದ ಸಿ ಪಿ.ಐ. (ಎಂ) ಪಕ್ಷದ ಮುಖ ಪತ್ರ ಐಕ್ಯರಂಗ ಇಂದಿರಾ ಕಾಂಗ್ರೆಸ್ಸನ್ನು ಸೋಲಿಸಲು ಕರ್ನಾಟಕದ ಜನತೆಗೆ ಕರೆ ಕೊಟ್ಟಿತು. ಸಿ.ಪಿ.ಐ. [ಎಂ] ಪಕ್ಷದ ಕಾರ್ಯದರ್ಶಿಯವರಾದ ಕಾಂ| ಇ. ಎಂ. ಎಸ್. ನಂಬೂದಿರಿಪಾದ್ ಅವರು ಡಿಸೆಂಬರ್ 28 ರಿಂದ ಜನವರಿ 2ನೇ ತಾರೀಕಿನವರೆಗೆ, ದಕ್ಷಿಣ ಕನ್ನಡ, ಕೊಡಗು, ಮೈಸೂರು, ಬೆಂಗಳೂರು, ಮಂಡ್ಯ, ಕೋಲಾರ, ತುಮಕೂರು ಜಿಲ್ಲೆಗಳಲ್ಲಿ 20ಕ್ಕೂ ಮೇಲ್ಪಟ್ಟು ಸಭೆಗಳಲ್ಲಿ ಭಾಷಣ ಮಾಡಿದ್ದರು. ಪೊಲಿಟ್ ಬ್ಯೂರೋ ಸದಸ್ಯ ಬಿ. ಟಿ. ರಣದಿವೆಯವರು ಮತ್ತು ಕಾಂ| ರಾಮಮೂರ್ತಿಯವರು ಬೆಂಗಳೂರು, ಕೋಲಾರ ಜಿಲ್ಲೆಗಳಲ್ಲೂ, ಹಾಗೆಯೇ ಕಾಂ| ಉಮಾನಾಥ್ ಅವರೂ ಮೇಲಿನೆರಡು ಜಿಲ್ಲೆಗಳಲ್ಲೂ ಹಲವಾರು ಕಡೆ ಭಾಷಣ ಮಾಡಿದ್ದರು.

"ಒಂದೇ ಸಿನೆಮಾವನ್ನು ನೀವು ಹಲವಾರು ಸಲ ನೋಡುವುದಿಲ್ಲ. ಬದಲಾವಣೆ ಬೇಕೇ ಬೇಕು. ಹಾಗೆಯೇ ಇಂದಿರಾ ಸಿನೆಮಾವನ್ನು ಕರ್ನಾಟಕದ ಜನ ಕಳೆದ 35 ವರ್ಷಗಳಿಂದಲೂ ನೋಡುತ್ತ ಬಂದಿದ್ದೀರಿ. ಈ ಚುನಾವಣೆಯಲ್ಲಿ ಕಾಂಗ್ರೆಸ್ಸನ್ನು ಬದಲಾವಣೆ ಮಾಡಬೇಕು" ಎಂದು ಮಾರ್ಕ್ಸಿಸ್ಟ್ ಮುಂಖಡರಾದ ಕಾಂ| ಬಿ. ಟಿ ರಣದಿವೆಯವರು ಗುಡಿಬಂಡಾದಲ್ಲಿ ಕಾಂ| ಅಪ್ಪಸ್ವಾಮಿರೆಡ್ಡಿಯವರ ಪರವಾಗಿ ಭಾಷಣ ಮಾಡುತ್ತಾ ಹೇಳಿದರು. ಕಾಂ| ಸೂರ್ಯನಾರಾಯಣರಾವ್ ಅವರ ಪರವಾಗಿ ಬೆಂಗಳೂರು ಗ್ರಾಮಾಂತರ ಪ್ರದೇಶವಾದ ಅತ್ತೂರಿನಲ್ಲಿ ಪ್ರಚಂಡ ಸಾರ್ವಜನಿಕ ಸಭೆಯನ್ನುದ್ದೇಶಿಸಿ "ಕರ್ನಾಟಕದಲ್ಲಿ ಜನತಾ, ಕ್ರಾಂತಿರಂಗ, ಸಿ. ಪಿ. ಐ. ಮತ್ತು ಸಿ. ಪಿ. ಐ. (ಎಂ) ಐಕ್ಯ ಹೊಂದಾಣಿಕೆಯು ಈ ಚುನಾವಣೆಯಲ್ಲಿ ಬಹುಮತ ಪಡೆಯುವುದು ಅತ್ಯಗತ್ಯ. ಕರ್ನಾಟಕದಲ್ಲಿ ವಿರೋಧ ಪಕ್ಷಗಳ ಸರಕಾರ ಅಧಿಕಾರಕ್ಕೆ ಬರಲೆಂದು ಹಾರೈಸುತ್ತೇನೆ." ಎಂದು ಕಾಂ| ಇ. ಎಂ. ಎಸ್. ನಂಬೂದಿರಿಪಾದ್ ಅವರು ಭಾಷಣ ಮಾಡುತ್ತ ಹೇಳಿದ್ದರು.

ದೇಶದಲ್ಲಿ ಆರ್ಥಿಕ ಬಿಕ್ಕಟ್ಟು ತೀವ್ರಗೊಳ್ಳುತ್ತಿದೆ. ಇಡೀ ಜಗತ್ತೇ ಬಿಕ್ಕಟ್ಟಿನಲ್ಲಿರುವಾಗ ಇದೇನು ಮಹಾ ಎಂದು ಜನತೆ ಎದುರಿಸುತ್ತಿರುವ, ಬೆಲೆಯೇರಿಕೆ, ನಿರುದ್ಯೋಗ, ಭ್ರಷ್ಟಾಚಾರ, ಲಂಚಗುಳಿತನ, ಕಳ್ಳ ಸಂತೆಗಳ ಕುರಿತೆಲ್ಲ ಇಂದಿರಾ ಗಾಂಧಿಯಪರು ಹಗುರವಾದ ಮಾತುಗಳನ್ನಾಡಿ, ವಿರೋಧ ಪಕ್ಷಗಳೇ ಇವುಗಳಿಗೆಲ್ಲ ಮುಖ್ಯ ಕಾರಣವೆಂದು ಸುಳ್ಳು ಅಪಾದನೆ ಮಾಡುತ್ತಿರುವಾಗ, ಆಂಧ್ರ–ಕರ್ನಾಟಕದ ಜನತೆ ಎಂದೆಂದಿಗೂ ತನ್ನನ್ನು ಬಿಟ್ಟು ಅಲುಗಾಡಲು ಸಾಧ್ಯವೇ ಇಲ್ಲೆಂಬ ಆತ್ಮ ವಿಶ್ವಾಸವನ್ನು ಇಂದಿರಾ ಗಾಂದಿಯವರು ದೃಢವಾಗಿ ನಂಬಿಕೊಂಡಿದ್ದಾಗ, ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಾರ್ಟಿ ಮಾತ್ರ ಕಳೆದ ಮೂರು ವರ್ಷಗಳ ರಾಜಕೀಯ ಸ್ಥಿತ್ಯಂತರಗಳನ್ನು ಆಳವಾಗಿ ಪರಾಮರ್ಶಿಸಿ, ಈ ಎರಡು ರಾಜ್ಯಗಳಲ್ಲಿ ಕೂಡ ಬದಲಾವಣೆ ತರಲು ಸಾಧ್ಯವಿದೆಯೆಂದು ತಿಳಿದು, ಆಂಧ್ರದಲ್ಲಿ ಎನ್. ಟಿ. ರಾಮರಾವ್, ಜನತಾ, ಸಿ. ಪಿ. ಐ. ಮೊದಲಾದ ಪಕ್ಷಗಳೊಳಗೆ, ಕರ್ನಾಟಕದಲ್ಲಿ ಜನತಾ, ಕ್ರಾಂತಿರಂಗ, ಸಿ. ಪಿ. ಐ. ಗಳೊಡನೆ ಹೊಂದಾಣಿಕೆ ಮಾಡಿಕೊಳ್ಳುಂತೆ ಶತ ಪ್ರಯತ್ನ ಮಾಡಿತು; ಆಂಧ್ರದಲ್ಲಿ ಎನ್.ಟಿ.ಆರ್. ತಮ್ಮದೇ ಆದ ನೀತಿಯನ್ನನುಸರಿಸಿದರು. ಹೀಗಾಗಿ ಎಡ ಮತ್ತು ಪ್ರಜಾಪ್ರಭುತ್ವ ಶಕ್ತಿಗಳನ್ನೆಲ್ಲ ಕೂಡಿಸಿ, ಆಂಧ್ರದ ರಾಜಕೀಯಕ್ಕೆ ಹೊಸ ತಿರುವು ಕೊಡಲು ಸಾಧ್ಯವಾಗಲಿಲ್ಲ. ಆದರೆ, ಆಂಧ್ರದಲ್ಲಿಯೂ ಇಂದಿರಾ ಬಂಡೇಕಲ್ಲು ಉರುಳಿ ಬೀಳುವಂತಾಗಿದೆ. ಇದು ಸ್ವಾಗತಾರ್ಹ. ಆದರೆ ಎನ್.ಟಿ.ಆರ್. ಅವರ ಮುಂದಿನ ಚಟುವಟಿಕೆಗಳನ್ನು ಗಮನಿಸಬೇಕಾಗಿದೆ. ಮದ್ರಾಸಿನ ಎ.ಐ.ಡಿ.ಎಂ.ಕೆ.ಯ ರಾಮಚಂದ್ರನ್ ಅವರಂತೆ, ಎನ್.ಟಿ.ಆರ್. ಸಂಧರ್ಭೋಚಿತವಾಗಿ ಇಂದಿರಾ ಗಾಂಧಿಯ ಧೋರಣೆತ ಹೊಂದಿಕೊಂಡು ಹೋಗುತ್ತಾರೋ ಅಥವಾ ಇಂದಿರಾ ಸರ್ವಾಧಿಕಾರದ ವಿರುದ್ಧ, ಪ್ರಜಾಪ್ರಭುತ್ವ ರಕ್ಷಣೆಗಾಗಿ, ರಾಜ್ಯಗಳ ಅಧಿಕಾರದ ಸ್ವಾಯತ್ತೆಗಾಗಿ ಧೈರ್ಯದಿಂದ ಹೋರಾಡಿ, ಎಡ ಮತ್ತು ಪ್ರಜಾಪ್ರಭುತ್ವ ಶಕ್ತಿಗಳ ಬೆಳವಣಿಗೆಗೆ, ಐಕ್ಯತೆಗೆ ಸಹಾಯ ಮಾಡುತ್ತಾರೋ ಹೇಗೆಂಬುದನ್ನು ಕಾದು ನೋಡಬೇಕಾಗಿದೆ.

ಕರ್ನಾಟಕದಲ್ಲಿ ಮಾತ್ರ ಆಂಧ್ರ ಪ್ರದೇಶದಂತೆ ಸಿನೆಮಾನಟರ ಹಾವಳಿ, ಪ್ರಭಾವ ಇಲ್ಲದಿರುವುದು ಪ್ರಜಾಪ್ರಭುತ್ವದ ವಿಕಾಸ, ಬೆಳವಣಿಗೆಗೆ ಹೆಚ್ಚು ಸಹಾಯಕಾರಿ ಆಗಬಹುದು. ಕ್ರಾಂತಿರಂಗದ ನಜೀರ್ ಸಾಬ್, ಬಂಗಾರಪ್ಪನಂಥವರು ಎಡ ವಿಚಾರ ಹೊಂದಿದವರಾಗಿದ್ದಾರೆ. ಸಮಾಜದಲ್ಲಿ ಕ್ರಾಂತಿಕಾರಿ ಬದಲಾವಣೆಯಾಗಬೇಕು, ಸಮತಾವಾದಿ ವಿಚಾರದ ಪ್ರಭಾವ ಬೆಳೆಯಬೇಕು. ಸಿ.ಪಿ.ಐ., ಸಿ.ಪಿ.ಐ. (ಎಂ) ಬೆಳೆಯಬೇಕೆಂಬ ವಿಚಾರ ಹೊಂದಿದವರಾಗಿದ್ದಾರೆ. ಜನತಾ ಪಾರ್ಟಿಯಲ್ಲಿ ಕೆಲವರು ಸಂದರ್ಭ ಸಾಧಕರಿದ್ದರೂ ಕೂಡ, ಮೂರು ವರ್ಷಗಳ ಕಹಿ ಅನುಭವ, ಕಾಂಗ್ರೆಸ್ ಆಳ್ವಿಕೆಯ ಕುರಿತು ಮತದಾರರು ತೋರಿಸಿದ ಸಿಟ್ಟು–ಇವುಗಳಿಂದ ಇವರೆಲ್ಲ ಪಾಠ ಕಲಿತಿರಬೇಕೆಂದು ಆಶಿಸೋಣ. ಇವರೆಲ್ಲ ತಮ್ಮ ವಿಚಾರಗಳನ್ನು ತಿದ್ದಿಕೊಳ್ಳದಿದ್ದರೆ, ಜಾಗೃತ ಜನತೆ ಇವರೆಲ್ಲರಿಗೆ ಸರಿಯಾದ ಬುದ್ಧಿ ಕಲಿಸುತ್ತಾರೆಂಬುದರಲ್ಲಿ ಏನೂ ಸಂಶಯವಿಲ್ಲ. ಹೀಗಾಗಿ ಕರ್ನಾಟಕದಲ್ಲಿ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಾರ್ಟಿ ಪ್ರಥಮ ಬಾರಿ ಮೂರು ಸ್ಥಾನಗಳಿಸಿ ವಿಧಾನ ಸಭೆಯೊಳಗೆ ಹೋರಾಡಲು ಅವಕಾಶ ಪಡೆದಿದೆ, ಸಿ. ಪಿ. ಐ. ಮಾತ್ರ ಕಾಂ| ಬಿ. ವಿ. ಕಕ್ಕಿಲ್ಲಾಯರಂತ ಅನುಭವಿಗಳನ್ನು ಕಳಕೊಂಡರೂ, ಕಾಂ| ಎಂ. ಎಸ್. ಕೃಷ್ಣನ್ ಅಂಥವರು ಗೆದ್ದು ಬಂದು ತನ್ನ 3 ಸ್ಥಾನವನ್ನಷ್ಟೇ ಉಳಿಸಿಕೊಂಡಿದೆ. ಜನತಾ ಪಾರ್ಟಿ ತನ್ನ ಬಲ ಹೆಚ್ಚಿಸಿಕೊಂಡಿದೆ. ಕ್ರಾಂತಿರಂಗ ತಾನು ಅಪೇಕ್ಷಿಸಿದಕ್ಕಿಂತಲೂ ಹೆಚ್ಚು ಸ್ಥಾನ ಪಡೆದಿದೆ. ಸ್ವಲ್ಪ ಹೆಚ್ಚು ಮುತ್ಸದ್ದಿತನದಿಂದ ಉಮೇದುವಾರರನ್ನು ಆಯ್ಕೆ ಮಾಡಿದ್ದಾಗಿದ್ದರೆ, ಜನತಾ-ಕ್ರಾಂತಿರಂಗಗಳೂ ಹೆಚ್ಚು ಸ್ಥಾನ ಗೆಲ್ಲಬಹುದಾಗಿತ್ತು. ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಾರ್ಟಿಗೂ ಇನ್ನೊಂದೆರಡು ಸ್ಥಾನ ಹೆಚ್ಚು ಪಡೆಯಲು ಸಾಧ್ಯವಾಗುತ್ತಿತ್ತು. ಈಗಲೂ ಕೂಡ ಕರ್ನಾಟಕದಲ್ಲಿ ಎಡ ಮತ್ತು ಪ್ರಜಾಪ್ರಭುತ್ವ ಶಕ್ತಿಗಳ ಐಕ್ಯತೆಗೆ ಮತ್ತು ಬೆಳವಣಿಗೆಗೆ ಈ ನಾಲ್ಕು ಪಕ್ಷಗಳ ವಿಜಯ ಹೆಚ್ಚು ಅವಕಾಶ ಮಾಡಿಕೊಡುವುದರಲ್ಲಿ ಸಂಶಯವಿಲ್ಲ.

(7ನೇ ಪುಟ ನೋಡಿ)

ನೆರೆ ಹೊರೆ

ಮಹಾರಾಷ್ಟ್ರ :

ಕಿಸಾನ್ ಜಾಥಾ—ನಾಗಪುರದಲ್ಲಿ ಕೆಂಪು ಸಾಗರ

ಮಹಾರಾಷ್ಟ್ರದ ಮೂರು ಎಡ ಪಕ್ಷಗಳಾದ ಸಿ.ಪಿ.ಐ [ಎಂ], ಸಿ. ಪಿ. ಐ. ಹಾಗೂ ರೈತ–ಕಾರ್ಮಿಕ ಪಕ್ಷ (ಪಿ.ಡಬ್ಲ್ಯು.ಪಿ) ಸಂಘಟಿಸಿದ ಸಮರಶೀಲ ರೈತರು, ಕಾರ್ಮಿಕರು ಹಾಗೂ ಕೃಷಿ ಕೂಲಿಗಾರರು 15 ಸಾವಿರಕ್ಕೂ ಮಿಕ್ಕಿದ ದುಡಿಯುವ ಜನರು ನಾಗಪುರ ಬೀದಿಗಳಲ್ಲಿ ಡಿಸೆಂಬರ್ 20 ರಂದು ಅತ್ಯುತ್ಸಾಹದಿಂದ ಮೆರವಣಿಗೆ ನಡೆಸಿದರು. ಆ ದಿನ ನಾಗಪುರವಿಡೀ ಕೆಂಪು ಬ್ಯಾನರುಗಳಿಂದ, ಪತಾಕೆಗಳಿಂದ, ಕೆಂಪು ಮುಂಡಾಸುಗಳಿಂದ ಕೆಂಪು ಸಾಗರ ಉಕ್ಕೇರಿ ಬಂದಂತೆ ಕಾಣುತ್ತಿತ್ತು. ಇತ್ತೀಚಿನ ವರ್ಷಗಳಲ್ಲಿ ಕೇವಲ ಎಡ ಪಕ್ಷಗಳೇ ಸೇರಿ ಸಂಘಟಿಸಿದ ಮೊದಲಿನ ಜಾಥಾ ಇದು. ಸಾವಿರಾರು ಬಡ ರೈತರು ಹಾಗೂ ಹಸು ಗೂಸುಗಳನ್ನು ಹಿಡಿದುಕೊಂಡ ಮಹಿಳೆಯರು ಮೂರು ದಿನಗಳಿಂದ 75-80 ಮೈಲು ನಡೆದು ಈ ಜಾಥಾದಲ್ಲಿ ಭಾಗವಹಿಸಿದ್ದು ಇದರ ಇನ್ನೊಂದು ವೈಶಿಷ್ಟ್ಯ.

ಬರಗಾಲ ಪರಿಹಾರ, ಕೃಷಿ ಉತ್ಪನ್ನಗಳಿಗೆ ಯೋಗ್ಯ ಬೆಲೆ, ಕೃಷಿ ಕೂಲಿಗಾರರಿಗೆ ಕನಿಷ್ಠ ಕೂಲಿಯಲ್ಲಿ ಹೆಚ್ಚಳ, ಗಿರಣಿ ಕಾರ್ಮಿಕರ ಬೇಡಿಕೆಗಳ ಗೌರವಯುತ ಇತ್ಯರ್ಥ, ಆದಿವಾಸಿಗಳನ್ನು ತೀವ್ರ ತೊಂದರೆಗೊಳಪಡಿಸಿದ ಅರಣ್ಯ ಮಸೂದೆ ವಾಪಸ್ಸು ಪಡೆಯುವುದು, ಗುಡಿಸಲು ವಾಸಿಗಳು, ನೆಲೆಯಿಲ್ಲದವರ ಸಮಸ್ಯೆ ಪರಿಹಾರ, ವಿಸರ್ಜಿತಗೊಂಡಿರುವ 200 ಮುನಿಸಿಪಾಲಿಟಿ ಹಾಗೂ ಜಿಲ್ಲಾ ಪರಿಷತ್ತುಗಳಿಗೆ ತಕ್ಷಣ ಚುನಾವಣೆ, ಭೂಮಿತಿ ಕಾನೂನಿನ ಸರಿಯಾದ ಪಾಲನೆ, ಅಗ್ಗ ದರದಲ್ಲಿ ಜೀವನಾವಶ್ಯಕ ಸಾಮಗ್ರಿಗಳ ಪೂರೈಕೆ ಹಾಗೂ ಎಲ್ಲಾ ನ್ಯಾಯಯುತ ಪ್ರದರ್ಶನಗಳನ್ನು, ಹೋರಾಟಗಳನ್ನು ದಮನಮಾಡಲು ಉಪಯೋಗಿಸುವ ವಿವಿಧ ಪೋಲೀಸ್ ಕಾನೂನುಗಳಿಗೆ ಕೊನೆ ಇತ್ಯಾದಿ ಬೇಡಿಕೆಗಳನ್ನು ಮುಂದಿಟ್ಟುಕೊಂಡು ಈ ಜಾಥಾ ನಡೆಯಿತು. ಕಿಸಾನ್ ಚಳವಳಿಯ ಅಖಿಲ–ಭಾರತ ನಾಯಕರುಗಳಾದ ಸಿ. ಪಿ. ಐ [ಎಂ]ನ ಸೂರ್‌ಜೀತ್ ಹಾಗೂ ಸಿ. ಪಿ. ಐ. ನ ಇಂದ್ರದೀಪ್ ಸಿನ್ಹಾ ಜಾಥಾವನ್ನುದ್ದೇಶಿಸಿ ಮಾತನಾಡಿ ಕಾಂಗ್ರೆಸ್ [ಐ]ನ ಗೋಸುಂಬೆತನವನ್ನು ಬಯಲಿಗೆಳೆದರು. ಎಡ ಪಕ್ಷಗಳ ಸಂಯೋಜಿತ ಸಮಿತಿ ಮರುದಿನ ಸಭೆ ಸೇರಿ ಎರಡು ನಿರ್ಧಾರ ಕೈಗೊಂಡಿತು. 1. ಜನವರಿ 26ನ್ನು ರಾಜ್ಯದ ಎಲ್ಲಾ ಮಟ್ಟಗಳಲ್ಲಿ ಪ್ರತಿಭಟನಾ ದಿನವಾಗಿ ಆಚರಿಸುವುದು. 2. ಜನವರಿ 7 ರಂದು ರಾಜ್ಯದ ಎಡ ಪಕ್ಷಗಳ ಎಲ್ಲಾ ಕೃಷಿ ಕೂಲಿಗಾರರ ಸಂಘಟನೆಗಳ ಸಭೆಯನ್ನು ಮುಂಬೈಯಲ್ಲಿ ನಡೆಸಿ ಬರಗಾಲ ಪರಿಹಾರ ಹಾಗೂ ಕನಿಷ್ಠ ವೇತನದ ಬಗ್ಗೆ ಮುಂದಿನ ಹೋರಾಟ ಕುರಿತು ನಿರ್ಧರಿಸುವುದು.

○

ಪಶ್ಚಿಮ ಬಂಗಾಳ :

ಚಹಾ ಮಾಲೀಕರ ಸಂಚಿಗೆ ಪ್ರತಿಭಟನೆ

ಡಾರ್ಜಿಲಿಂಗ್ ಪ್ರದೇಶದ ಚಹಾ ತೋಟಗಳಲ್ಲಿ ಅಪಾರ ಲಾಭ ಕೊಳ್ಳೆ ಹೊಡೆದು, ಲಾಭವನ್ನು ದುರುಪಯೋಗಪಡಿಸಿಕೊಂಡು, ಸರಕಾರ ಹಾಗೂ ಹಣಕಾಸಿನ ಸಂಸ್ಥೆಗಳು ಇತ್ತ ಆರ್ಥಿಕ ನೆರವನ್ನು ಬೇರೆಡೆ ದುರುಪಯೋಗಪಡಿಸಿದ ಚಹಾ ತೋಟಗಳ ಮಾಲೀಕರು ಈಗ ಚಹಾ ಉದ್ಯಮದಲ್ಲಿ ಬಿಕ್ಕಟ್ಟು ತೋರಿದೆಯೆಂಬ ನೆಪವೊಡ್ಡಿ ತಮ್ಮ ಕಾರ್ಮಿಕರ ಮೇಲೆ ಹಲ್ಲೆ ನಡೆಸಲಾರಂಭಿಸಿದ್ದಾರೆ. ಕೆಲವರು ಏಕಪಕ್ಷೀಯವಾಗಿ ತಮ್ಮ ಉದ್ಯಮಗಳನ್ನು ಮುಚ್ಚುತ್ತಿದ್ದಾರೆ; ಕಾರ್ಮಿಕರ ಕೆಲಸದ ದಿನಗಳಲ್ಲಿ ಕಡಿತ ಮಾಡುತ್ತಿದ್ದಾರೆ; ಕಾನೂನಿನ್ವಯ ಕಾರ್ಮಿಕರಿಗೆ ಸಿಗುತ್ತಿರುವ ಹಲವು ಪ್ರಯೋಜನಗಳನ್ನು ನಿರಾಕರಿಸುತ್ತಿದ್ದಾರೆ; ಕಾರ್ಮಿಕರನ್ನು ಉಪವಾಸ ಕೆಡವುತ್ತಿದ್ದಾರೆ.

ಚಹಾ ಮಾಲೀಕರ ಈ ದಾಳಿಯನ್ನು ಎದುರಿಸಲು ಡಾರ್ಜಿಲಿಂಗ್ ಜಿಲ್ಲೆ ಚಹಾ ಮಜದೂರ್ ಯೂನಿಯನ್ ಡಿಸೆಂಬರ್ 9ರ ತನ್ನ ಸಭೆಯಲ್ಲಿ ನಿರ್ಧರಿಸಿದೆ. ಚಹಾ ಬೆಳೆಯುವ ಪ್ರದೇಶದಾದ್ಯಂತ ಉಗ್ರ ಹೋರಾಟ ನಡೆಸಲು, ಅಗತ್ಯ ಬಿದ್ದರೆ ಮುಷ್ಕರಕ್ಕೆ ಸಿದ್ಧರಾಗಿರಲು ಅದು ಕಾರ್ಮಿಕರಿಗೆ ಕರೆ ನೀಡಿದೆ.

ಚಹಾ ಮಾಲೀಕರ ಸಂಚನ್ನು ಪಶ್ಚಿಮ ಬಂಗಾಳ ಸರಕಾರದ ಗಮನಕ್ಕೆ ತಂದು ಚಹಾ ತೋಟಗಳನ್ನು ನಿರ್ನಾಮವಾಗದಂತೆ ಅಗತ್ಯ ಕ್ರಮಕೈಗೊಳ್ಳಬೇಕೆಂದು ರಾಜ್ಯ ಸರಕಾರ ಹಾಗೂ ಕೇಂದ್ರ ಸರಕಾರಗಳನ್ನು ಅದು ವಿನಂತಿಸಿಕೊಂಡಿದೆ. ಅದೇ ರೀತಿ ಈ ಪ್ರದೇಶದ ಆರ್ಥಿಕತೆಯ ಜೀವನಾಡಿಯಾದ, ಸಾವಿರಾರು ಕಾರ್ಮಿಕರಿಗೆ ಜೀವನದ ಆಸರೆಯಾದ, ದೇಶಕ್ಕೆ ಅತ್ಯಮೂಲ್ಯ ವಿದೇಶೀವಿನಿಮಯಗಳಿಸಿಕೊಡುವ ಈ ಉದ್ಯಮವನ್ನು ಕೆಲವು ಲಾಭಕೋರ ಮಾಲೀಕರಿಂದ ಉಳಿಸಿಕೊಳ್ಳಬೇಕೆಂದು ಡಾರ್ಜಿಲಿಂಗ್‌ನ ಜನತೆಯನ್ನು ಅದು ಕೇಳಿಕೊಂಡಿದೆ.

●

ಬಿಹಾರ್ :

ಮಾಲೀಕ ಗೂಂಡಾಗಳಿಂದ ಗೇಣೀದಾರ ರೈತರ ಕೊಲೆ

ಡಿಸೆಂಬರ್ 18 ರಂದು ಬಿಹಾರಿನ ಖಗಾರಿಯಾದ ಚೌಥಾಮ್ ಬ್ಲಾಕಿನಲ್ಲಿ ತಮ್ಮ ಗದ್ದೆಗಳಲ್ಲಿ ಕೆಲಸ ಮಾಡುತ್ತಿದ್ದ ರಾಗೋಸಿಂಗ್ ಹಾಗೂ ಅವರ ಪುತ್ರ ಬೀರೇಂದ್ರ ಸಿಂಗ್‌ರನ್ನು ಹಾಡುಹಗಲೇ 'ನಕ್ಸಲೀಯ'ರೆಂದು ಹೇಳಿ ಕೊಳ್ಳುತ್ತಿದ್ದ ಭೂಮಾಲಿಕರ ಗೂಂಡಾಗಳು ಗುಂಡಿಕ್ಕಿ ಕೊಂದಿದ್ದಾರೆ. ಈ ಇಬ್ಬರು ಗೇಣೀದಾರ ರೈತರು ಸಿ ಪಿ.ಐ [ಎಂ]ನ ಸಕ್ರಿಯ ಕಾರ್ಯಕರ್ತರಾಗಿದ್ದರು. ಈ ಕ್ಷೇತ್ರದ ಆಡಳಿತ ಕಾನೂನು ವ್ಯವಸ್ಥೆಯನ್ನು ಸುಧಾರಿಸುವ ಬದಲು ಭೂಮಾಲಿಕರೊಂದಿಗೆ ಶಾಮೀಲಾಗಿತ್ತೆಂಬುದು ಎಲ್ಲರಿಗೂ ತಿಳಿದ ವಿಷಯ. ಆದ್ದರಿಂದ ಸಾಮಾಜಿಕ ಕಾರ್ಯಕರ್ತರು, ವಿಶೇಷವಾಗಿ ಸಿ.ಪಿ.ಐ [ಎಂ] ಕಾರ್ಯಕರ್ತರು ಸತತವಾಗಿ ಆಡಳಿತದ ಹಾಗೂ ಜಮೀನ್ದಾರರ ಚೇಲಾಗಳ ಕಿರುಕುಳವನ್ನು ಎದುರಿಸುತ್ತಿರಬೇಕಾಗಿದೆ. ಕೇವಲ ಇತ್ತೀಚೆಗಷ್ಟೇ ಇಲ್ಲಿ ಸಿ ಪಿ ಐ. [ಎಂ]ನ ಜಿಲ್ಲಾ ಕಾರ್ಯದರ್ಶಿ ಆನಂದಾ ಸಿಂಗರನ್ನು ಗೂಂಡಾ ಕಾನೂನು ಪ್ರಕಾರ ಇಲ್ಲಿನ ಆಡಳಿತ ಬಂಧಿಸಿರುವುದನ್ನು ಪಟ್ನಾ ಉಚ್ಚ ನ್ಯಾಯಾಲಯ ರದ್ದು ಮಾಡಿತ್ತು.

●

ಕೇರಳ :

ಯುವ ಜನರ ಬೃಹತ್ ಹೋರಾಟ

ಕೇರಳದ ಯುವ ಜನತೆ ಮೊದಲು ಆಗಿನ ಕೇರಳ ಸಮಾಜವಾದೀ ಯುವ ಜನ ಫೆಡರೇಶನ್‌ನ ನೇತೃತ್ವದಲ್ಲಿ ನಂತರ ಜನವಾದೀ ಯುವಜನ ಫೆಡರೇಶನ್ (ಡಿ.ವೈ.ಎಫ್.ಐ.)ನ ನೇತೃತ್ವದಲ್ಲಿ ಹಲವಾರು ಹೋರಾಟಗಳನ್ನು ನಡೆಸಿ ಪಡೆದುಕೊಂಡ ನಿರುದ್ಯೋಗ ಭತ್ಯೆಯನ್ನು ಕೇವಲ ನಾಮಮಾತ್ರಗೊಳಿಸುವ ಕರುಣಾಕರನ್ ಸರಕಾರದ ಯತ್ನದ ವಿರುದ್ಧ ಕೇರಳದ ಎರಡೂವರೆ ಲಕ್ಷ ಯುವಜನರು ಡಿಸೆಂಬರ್ 20 ರಂದು ಡಿ ವೈ ಎಫ್.ಐ ನೇತೃತ್ವದಲ್ಲಿ ಕೇರಳದಾದ್ಯಂತ ಶಾಂತಿ ಪೂರ್ವಕ ಹಾಗೂ ಶಿಸ್ತಿನಿಂದ ಸರಕಾರೀ ಕಚೇರಿಗಳೆದುರು ಧರಣಿ ಕೂತು ಸರಕಾರೀ ಯಂತ್ರ ಒಂದು ದಿನದ ಮಟ್ಟಿಗೆ ನಿಂತು ಹೋಗುವಂತೆ ಮಾಡಿದರು

1957ರಲ್ಲಿ ಅಧಿಕಾರಕ್ಕೆ ಬಂದ ನಂಬೂದಿರಿಪ್ಪಾಡ್ ಸರಕಾರ ರೂಪಿಸಿದ ನಿರುದ್ಯೋಗ ಭತ್ಯೆ ಯೋಜನೆಯನ್ನು ಆ ಸರಕಾರ ಜ್ಯಾರಿಗೆ ತರುವುದರೊಳಗೇ ಈಗ ಆಳ್ವಿಕೆ ನಡೆಸುತ್ತಿರುವವರು ಸಂಚು ಹೂಡಿ ಅದನ್ನು ಉರುಳಿಸಿದರು. ಅಂದಿನಿಂದ ಒಂದು ದಶಕದವರೆಗೆ ಈ ಯೋಜನೆಯನ್ನು ಜ್ಯಾರಿಗೊಳಿಸಲು ಒತ್ತಾಯಿಸಿ ಕೇರಳದ ಯುವಜನತೆ ಹಲವು ಹೋರಾಟಗಳನ್ನು ನಡೆಸಿದರು. ಇದರ ಪರಿಣಾಮವಾಗಿ 1978ರಲ್ಲಿ ಆಂತೋಣಿ ಕಂಪೆನಿ ಮನಸ್ಸಿಲ್ಲದ ಮನಸ್ಸಿನಿಂದ ಜ್ಯಾರಿಗೆ ತಂದ ಒಂದು ಯೋಜನೆ ಪರಿಣಾಮದಲ್ಲಿ ತುಂಬಾ ದುರ್ಬಲವಾಗಿತ್ತು. ಅದನ್ನೂ ಆ ಕಂಪೆನಿ ಒಂದು ವರ್ಷದ ನಂತರ ರದ್ದುಗೊಳಿಸಿತು. 1980ರಲ್ಲಿ ಅಧಿಕಾರಕ್ಕೆ ಬಂದ ಎಡ–ಪ್ರಜಾಪ್ರಭುತ್ವ ಸರಕಾರ ತನ್ನ ಚುನಾವಣಾ ಘೋಷಣೆಯಲ್ಲಿತ್ತ ವಚನದಂತೆ ಈ ಯೋಜನೆಯ ದುರ್ಬಲ ಅಂಶಗಳನ್ನು ಹೋಗಲಾಡಿಸಿ ಭತ್ಯೆಯನ್ನು 50 ರೂ.ಗೇರಿಸಿತು ನಯನಾರ್ ಸರಕಾರ ಅಧಿಕಾರದಿಂದ ನಿರ್ಗಮಿಸುವ ಹೊತ್ತಿಗೆ ಸುಮಾರು ಎರಡೂವರೆ ಲಕ್ಷ ಯುವ ಜನತೆ ಇದರ ಲಾಭ ಪಡೆಯುತ್ತಿತ್ತು. ನಯನಾರ್ ಸರಕಾರದ ನಿರ್ಗಮನದೊಂದಿಗೆ ಸಾವಿರಾರು ಯುವಜನರಿಗೆ ಸಹಾಯಕವಾಗುತ್ತಿದ್ದ ಈ ಯೋಜನೆಯನ್ನು ರದ್ದುಗೊಳಿಸಲಾಯ್ತು. ಈಗಿನ ಸರಕಾರ ಈ ಯೋಜನೆಯನ್ನು ಪುನರಾರಂಭಿಸುವ ಬಗ್ಗೆ ವಚನವಿತ್ತಿದ್ದರೂ ಅಧಿಕಾರಕ್ಕೆ ಬಂದು ವರುಷವಾದರೂ ಏನೂ ಮಾಡಲಿಲ್ಲ. ಮಂತ್ರಿಗಳ ಸಂಖ್ಯೆ, ವೇತನ, ಸೌಲಭ್ಯ ಹೆಚ್ಚಿಸುವಾಗ, ಏಶಿಯಾಡ್‌ಗೆ ಆನೆಗಳನ್ನು ಕಳಿಸುವಾಗ ಹಣದ ಮುಗ್ಗಟ್ಟಿನ ನೋವೇ ಇಲ್ಲದ ಸರಕಾರಕ್ಕೆ ಈ ಯೋಜನೆಯ ಬಗ್ಗೆ ಕೇಳಿದಾಗ ಹಣದ ಮುಗ್ಗಟ್ಟಿನ ನೆವ ನೆನಪಾಯಿತು... ಸ್ವಾಭಾವಿಕವಾಗಿಯೇ ಆಳುವ ರಂಗಕ್ಕೆ ಸೇರಿದ ಯುವ ಸಂಘಟನೆಗಳೂ ಸೇರಿದಂತೆ ಎಲ್ಲಾ ಯುವ ಸಂಘಟನೆಗಳೂ ತಮ್ಮ ತೀವ್ರ ಅಸಂತೋಷವನ್ನು ವ್ಯಕ್ತಪಡಿಸಿದವು. ಈಗ ಕರುಣಾಕರನ್ ಸರಕಾರ ಕೆಲವು 'ಶರ್ತ'ಗಳೊಂದಿಗೆ ಈ ಯೋಜನೆಯನ್ನು ಜನವರಿಯಿಂದ ಜ್ಯಾರಿಗೊಳಿಸಲು ನಿರ್ಧರಿಸಿದೆ. ಈ 'ಶರ್ತ'ಗಳ ಪ್ರಕಾರ ಬಹುಸಂಖ್ಯಾತ ಯುವಜನತೆ ಈ ಯೋಜನೆಯ ಲಾಭದಿಂದ ವಂಚಿತರಾಗಿ ಈ ಯೋಜನೆ ಕೇವಲ ಒಂದು ತಮಾಷೆಯಾಗಿ ಉಳಿದಿದೆ.

ಇದನ್ನು ಪ್ರತಿಭಟಿಸಲು ಕೇರಳದ ಎರಡೂವರೆ ಲಕ್ಷ ಯುವ ಜನರು ಡಿ. ವೈ.ಎಫ್.ಐ ನ ನೇತೃತ್ವದಲ್ಲಿ ಡಿಸೆಂಬರ್ 20 ರಂದು ತಿರುವನಂತಪುರದಲ್ಲಿರುವ ಸೆಕ್ರೆಟಾರಿಯೇಟ್ ಹಾಗೂ ಜಿಲ್ಲಾ ಕೇಂದ್ರಗಳಲ್ಲಿರುವ ಕಲೆಕ್ಟರ್ ಕಚೇರಿಗಳನ್ನು ಸಾವಿರ–ಸಾವಿರ ಸಂಖ್ಯೆಯನ್ನು ಸುತ್ತುವರಿದು ಒಂದು ದಿನದ ಮಟ್ಟಿಗೆ ಸರಕಾರೀ ಯಂತ್ರವನ್ನು ನಿಷ್ಕ್ರಿಯಗೊಳಿಸಿ ಹೋರಾಟದಿಂದ ಪಡೆದ ಹಕ್ಕನ್ನು ಕಿತ್ತುಕೊಳ್ಳಲು ಯಾವ ಸರಕಾರಕ್ಕೂ ಸಾಧ್ಯವಿಲ್ಲ ಎಂದು ಎಚ್ಚರಿಕೆ ನೀಡಿದರು.

ಯುವಜನತೆಯ ಈ ಬೇಡಿಕೆ ನ್ಯಾಯ ಸಮ್ಮತ ಎಂದು ಎಲ್ಲರೂ ಒಪ್ಪುವಂತಹವು. ಸ್ವತಃ ಆಳುವ ರಂಗದ ಪಕ್ಷಗಳಿಗೆ ಸೇರಿದ ಯುವ ಸಂಘಟನೆಗಳೂ ಈ ಬೇಡಿಕೆಯನ್ನು ಮುಂದಿಟ್ಟಿರುವಾಗ, ಯುವಜನತೆ ಶಿಸ್ತಿನಿಂದ ಶಾಂತಿಯಿಂದ ತಮ್ಮ ಅಸಂತೋಷವನ್ನು ವ್ಯಕ್ತಪಡಿಸುತ್ತಿರುವಾಗ ಬೇಕೆಂದೇ ಪೋಲೀಸ್ ಏಜೆಂಟರ ಮೂಲಕ ಗಲಭೆ ನಡೆಸಿ ತ್ರಿಚೂರ್ ಮುಂತಾದೆಡೆ ಅನಾವಶ್ಯಕವಾಗಿ ಲಾಠೀ ಚಾರ್ಜು ಹಾಗೂ ಗುಂಡು ಹಾರಿಸಿ ಕರುಣಾಕರನ್ ಸರಕಾರ ತನ್ನ ನಿಜ ವೇಷವನ್ನು ಮತ್ತೊಮ್ಮೆ ಬಹಿರಂಗ ಪಡಿಸಿದೆ.

●

ಪಂಜಾಬ್ :

ಹೊಸ ತೆರಿಗೆಗಳ ವಿರುದ್ಧ ರೈತರ ಪ್ರದರ್ಶನ

ಡಿಸೆಂಬರ್ 27 ರಂದು ಪಂಜಾಬಿನ ಎಲ್ಲಾ ತಹಸಿಲ್ ಕೇಂದ್ರಗಳಲ್ಲಿ ಒಟ್ಟು ಸುಮಾರು 50 ಸಾವಿರಕ್ಕೂ ಮಿಕ್ಕಿದ ರೈತರು ಹಾಗೂ ಕೃಷಿ ಕೂಲಿಕಾರರು ಸರಕಾರದ ವಿರುದ್ಧ ಮತಪ್ರದರ್ಶನ ನಡೆಸಿದರು. ಪಂಜಾಬ್ ಕಿಸಾನ್ ಸಭಾದ ಕಾರ್ಯಕಾರೀ ಸಮಿತಿಯ ಕರೆಯ ಮೇರೆಗೆ ಈ ಪ್ರದರ್ಶನಗಳು ನಡೆದವು.

ಅಕಾಲಿ ಮೋರ್ಚಾ ಹಾಗೂ ರಾಜ್ಯದಲ್ಲಿ ಕೋಮುಗಳ ನಡುವಿನ ವಿರಸದ ಪರಿಸ್ಥಿತಿಯ ಲಾಭ ಪಡೆದು ಕಾಂಗ್ರೆಸ್ (ಐ) ಸರಕಾರ ರೈತರ ಮೇಲೆ ಭಾರೀ ತೆರಿಗೆಯನ್ನು ಹೊರಿಸಲು ಪ್ರಯತ್ನಿಸಿದೆ. ತರಕಾರಿಯೂ ಸೇರಿದಂತೆ ಎಲ್ಲಾ ಬೇಸಾಯ ಉತ್ಪನ್ನಗಳ ಮೇಲೆ ಒಂದು ಶೇಕಡಾ ಮಾರಾಟಕರ, ಕಾಲುವೆ ನೀರಿನ ಮೇಲೆ 117 ಕೋಟಿ ರೂ. ಗಳಷ್ಟು ತೆರಿಗೆಯನ್ನು ಬಲವಂತದಿಂದ ವಸೂಲು ಮಾಡುವುದು, ಕೊಳವೆ ಬಾವಿ ಹಾಗೂ ಮನೆ ಬಳಕೆಯ ವಿದ್ಯುತ್ ದರ ಏರಿಕೆ, ಸಂಪರ್ಕ ಶುಲ್ಕ, ಭದ್ರತಾ ಠೇವಣಿ ಇತ್ಯಾದಿಗಳ ಏರಿಕೆ, ಸರ್‌ಚಾರ್ಜ್ ಏರಿಕೆ ಇತ್ಯಾದಿಗಳ ಮೂಲಕ ಕೋಟ್ಯಂತರ ರೂಪಾಯಿ ತೆರಿಗೆಗಳನ್ನು ರೈತರ ಮೇಲೆ ಹೇರಿದರೂ ರೈತರ ಬೆಳೆಗಳಿಗೆ ಯೋಗ್ಯ ಪ್ರತಿಫಲ ಕೊಡಲು ನಿರಾಕರಿಸಲಾಗುತ್ತಿದೆ. ಬೆವರು ಸುರಿಸಿ ರೈತರು ಉಪಯೋಗಿಸಲಾರಂಭಿಸಿದ ಸರಕಾರೀ ಬಂಜರು ಭೂಮಿಯನ್ನು ಬಲಾತ್ಕಾರವಾಗಿ ಕಿತ್ತುಕೊಂಡು ಅವನ್ನು ಹರಾಜು ಮಾಡಲಾಗುತ್ತಿದೆ. ಮಾರಾಟ ತೆರಿಗೆ ಹೆಚ್ಚಿಸಲಾಗಿದೆ. ಬಸ್ ದರವನ್ನು 60% ಹೆಚ್ಚಿಸುವ ಯೋಜನೆಯಿದೆ. ಇವೆಲ್ಲಾ ಸಾಲದೆಂಬಂತೆ ಗೋಧಿ ಹಿಟ್ಟು, ತಾಳೆಯೆಣ್ಣೆ, ವನಸ್ಪತಿ ತುಪ್ಪ ಹಾಗೂ ಕೀಟನಾಶಕಗಳ ಮೇಲಿನ ಸಹಾಯ ಧನವನ್ನು ರದ್ದುಗೊಳಿಸಲಾಗಿದೆ. ಈ ಭಾರೀ ಹೊರೆ ಸಹಿಸಲಸಾಧ್ಯ. ಆದ್ದರಿಂದಲೇ ಈ ಭಾರೀ ಮತಪ್ರದರ್ಶನ. ಪ್ರದರ್ಶನಕಾರರು ಕೆಂಪು ಬಾವುಟ,

(7ನೇ ಪುಟ ನೋಡಿ)

ಜೈನಾ ಕಥೆ :

ಏಳು ಕಿಡಿಗಳು

—ಯುವಾನ್-ಚಿನ್

ಕನ್ನಡಕ್ಕೆ— ವಂಶಿ

ತಲೆ ಎತ್ತಿ ನೋಡಿದೆ. ಮಳೆ ಪೂರ್ತಿಯಾಗಿ ನಿಂತು ಆದಾಗಲೇ ಸೂರ್ಯೋದಯವಾಗುತ್ತಿತ್ತು. ಸೂರ್ಯನನ್ನು ಕಂಡು ಎಷ್ಟೋ ದಿನಗಳಾಗಿತ್ತು! ಕೆಲವೇ ಹೊತ್ತಿನವರೆಗೂ ಭೀಭತ್ಸಕರವಾಗಿದ್ದ ವಾತಾವರಣ ಈಗ ಶಾಂತಿಯು ನೆಲೆಯಾಗಿತ್ತು.

ಕೆಲವು ಗಂಟೆಗಳ ಹಿಂದೆ ವಾತಾವರಣ ಹೀಗಿರಲಿಲ್ಲ. ಆಕಾಶದಲ್ಲಿ ಪೂರ್ಣ ಚಂದ್ರ ಪ್ರಶಾಂತ ರೀತಿಯಲ್ಲಿ ಬೆಳಗಾಗುತ್ತ ಈ ಜೌಗು ನೆಲದಲ್ಲಿ ಯಾವ ಬದಿಯು ಗುಂಡಿಯುಲ್ಲೂ ಬೀಳದಂತೆ ನನಗೆ ದಾರಿ ತೋರಿಸುತ್ತಿದ್ದ. ಬೆಳಗಾಗುವ ಹೊತ್ತಿಗೆ ನನ್ನ ದಳದವರು ಕೊನೆಯನ್ನು ತಲುಪುತ್ತೇವೆಂದು ಕೊಂಡೆ.

ನನ್ನ ಲಾಂಗ್ ಮಾರ್ಚ್ ಪಶ್ಚಿಮ ಚೀನಾದಲ್ಲಿನ ನಿರ್ಜನವಾದ ಬದಿಯು ನೆಲದ ಪ್ರದೇಶದಲ್ಲಿ ಸಾಗುತ್ತಿದ್ದೆವು. ಕಾಲಿಗೆ ತಗುಲಿದ್ದ ಗಾಯದಿಂದಾಗಿ ನಾನು ಕೊಂಚ ಹಿಂದುಳಿದೆ. ನಿಧಾನವಾಗಿ ನಡೆಯುತ್ತಾ ಎರಡು ದಿನ ತಡವಾಗಿ ಬರಲಿರುವ ಮಜಲಿಯಲ್ಲಿ ದಳವನ್ನು ಕೂಡಿಕೊಳ್ಳೋಣವೆಂದು ಕೊಂಡೆ. ನ್ಯಾಯವಾಗಿ ಈ ಹೊತ್ತಿಗೆ ನಾನು ದಳದಲ್ಲಿ ಕಲೆಯಬೇಕಾಗಿತ್ತು. ಆದರೆ...

ಕೆಲವು ಗಂಟೆಗಳ ಹಿಂದೆ ಪ್ರಶಾಂತವಾಗಿದ್ದ ವಾತಾವರಣವನ್ನು ಭಗ್ನಗೊಳಿಸುತ್ತಾ ಒಂದು ವಾಯುತರಂಗ ಚಂಡಮಾರುತಕ್ಕಿಂತಲೂ ವೇಗವಾಗಿ ಈ ನೆಲದ ಮೇಲೆ ಬೀಸಿತು. ಆ ಕೂಡಲೇ ಭೂಮಿಯಿಂದಲೇ ಹುಟ್ಟಿ ಬಂದಂತೆ ದೊಡ್ಡ ದೊಡ್ಡ ಮೋಡಗಳು ಬಂದು ಚಂದ್ರನನ್ನು ಕವಿಚಿ ಆಕಾಶವನ್ನು ಮುಚ್ಚಿದವು. ಗುಡುಗು— ಮಿಂಚುಗಳೊಂದಿಗೆ ಕುಂಭ ವೃಷ್ಟಿಗಾರಂಭವಾಯ್ತು. ನಿಂಬೆಕಾಯಿಯ ಗಾತ್ರದ ಆಲಿಕಲ್ಲು ಬೀಳಲಾರಂಭವಾಯ್ತು.

ಮೊದಲೇ ಬದಿಯು ನೆಲ. ಅದರಲ್ಲೂ ಛಳಿಗಾಲ. ಮೇಲಾಗಿ ಆಲಿಕಲ್ಲಿನ ಮಳೆಯೊಂದಿಗೆ ಚಳಿಗಾಳಿ ಬೀಸುತ್ತಿತ್ತು. ಕಾಲಿಗೆ ತಗುಲಿದ ಗಾಯದೊಂದಿಗೆ ಅರ್ಧ ನೀರಸಗೊಂಡಿದ್ದ ನಾನು ಪೂರ್ಣವಾಗಿ ಮೇಲೇಳದಾದೆ. ಮೈಗೆ ಅಂಟಿದ್ದ ಬಟ್ಟೆಗಿಂತಲೂ ಮೈ ಜಾಸ್ತಿಯಾಗಿ ತೊಯ್ದು ಹೋಗಿತ್ತು. ಬದಿಯು ನೆಲದಲ್ಲಿ ಅಡಿ ಎತ್ತಿ ಅಡಿಯಿರಿಸುವುದೇ ಕಷ್ಟವಾಗುತ್ತಿತ್ತು. ಅದರೊಂದಿಗೆ ವಿಪರೀತವಾದ ಛಳಿಯಿಂದ ಮೈ ಕೊರೆಯುತ್ತಿತು.

ಮಂಜುತೆರೆ ಸ್ವಲ್ಪಸ್ವಲ್ಪವಾಗಿ ಬಿಡುತ್ತಿತ್ತು. ಬದಿಯು ನೆಲದಲ್ಲಿ ಆಳೆತ್ತರ ಬೆಳೆದಿದ್ದ ಕಾಡುಕಡ್ಡಿ, ಚಂಡಮಾರುತದ ಆಘಾತಕ್ಕೆ ಮಳೆಯ ನೀರಿನ ಭಾರಕ್ಕೆ ನೆಲಕ್ಕೊರಗಿತ್ತು. ಬಾಚಣಿಗೆಯಿಂದ ಬಾಚಿದಂತೆ ನುಣ್ಣಗೆ ನೆಲಕ್ಕೇ ಅಂಟಿಕೊಂಡಿತ್ತು. ನೆಲವೆಲ್ಲಾ ಬಂಗಾರದಕಿವಾಸಿ ಹಾಸಿದಂತಿತ್ತಾಗಲೀ, ದಾರಿಯೇ ಕಾಣುತ್ತಿರಲಿಲ್ಲ. ಆಗಾಗ ಆ ಕಡ್ಡಿಯ ಮೇಲೆ ಬಿದ್ದ ಆಲಿಕಲ್ಲು, ಕಿವಾಸಿಯ ಮೇಲೆ ಹುದುಗಿಸಿದ ರತ್ನಗಳಂತೆ ಹೊಳೆಯುತ್ತಾ ಹಾಗೇ ಕರಗುತ್ತಿದ್ದುವು.

ಕಾಲಿನ ಗಾಯ ನೋಯುತ್ತಿತ್ತು. ಈ ಚಳಿಯಲ್ಲಿ ಉಸಿರಾಡುವುದೇ ಕಷ್ಟವಾಗುತ್ತಿತ್ತು. ಉಡುಪೇ ಅಲ್ಲ, ಶರೀರದ ಕಣಕಣಗಳೂ ಒದ್ದೆ ಮುದ್ದೆಯಾದಂತಿತ್ತು. ಇಂತಹ ಹೊತ್ತಿನಲ್ಲಿ ಕಾಯಿಸಿಕೊಳ್ಳಲು ಯಾರಾದರೂ ಬೆಂಕಿ ಹಾಕಿದರೆ,...ಒಂದು ಗುಟುಕು ಬಿಸಿನೀರು ಕುಡಿಯಲು ಸಿಕ್ಕಿದರೆ, ಓಹ್!

ಆದರೆ ಇದು ಕೇವಲ ಕನಸು. ಅಯ್ಯೋ! ಬರಿ ಹಗಲುಗನಸು. ಮೂರು ದಿನಗಳ ಹಿಂದೆಯೇ ದಳದಲ್ಲಿ ಕಲೆತು ಪಯಣಿಸುತ್ತಿರುವಾಗಲೇ ಆದಕ್ಕೆ ಗತಿಯಿಲ್ಲವಾಯ್ತು. ಅಂದು ದಳದವರೆಲ್ಲಾ ಹಸಿ ಗೋಧಿಯ ಹಿಟ್ಟನ್ನೇ ಕಲಸಿಕೊಂಡು ತಿನ್ನಬೇಕಾಯ್ತು. ದಳಕ್ಕೆ ಅದು ವಿನಹ ಇನ್ನೇನೂ ಉಳಿದಿರಲ್ಲ. ಆಹಾರ ಪದಾರ್ಥಗಳೆಲ್ಲ ಬಹಳ ದಿನಗಳ ಹಿಂದೆಯೇ ಮುಗಿದು ಹೋಗಿದ್ದುವು. ರೊಟ್ಟಿಗಳನ್ನು ಮಾಡಿಕೊಂಡು ಅದನ್ನೇ ಬರಿರೊಟ್ಟಿಯನ್ನು ತಿಡಿಯೋಣವೆಂದರೆ ಅದು ನಿರ್ಜನ ಪ್ರದೇಶ, ಎಲ್ಲೂ ಬೆಂಕಿಯೂ ಸಿಗುವಂತಿರಲಿಲ್ಲ. ನನ್ನ ದಳದವನ ಹತ್ತಿರವಿದ್ದ ಬೆಂಕಿಕಡ್ಡಿ ಎಲ್ಲಾ ಮುಗಿದುಹೋಗಿತ್ತು.

ಅನಾಲೋಚಿತವಾಗಿ ಜೇಬು ಸವರಿ ಕೊಂಡೆ. ಪ್ಯಾಂಟು ಜೇಬಿನಲ್ಲಿ ಕೈಗೆ ಏನೋ ಮೆತ್ತಗೆ ತಗುಲಿತು. ಆಶ್ಚರ್ಯ! ನೆನೆದು ಒದ್ದೆಯಾಗಿ ಜೇಬಿನ ಮೂಲೆಯಲ್ಲಿ ಸೇರಿಕೊಂಡಿದ್ದ ಬಾರ್ಲಿ ಹಿಟ್ಟು. ಎಲ್ಲಾ ಹೊರತೆಗೆದು ನೋಡಿದೆ. ಒಂದು ಕೋಳಿಮೊಟ್ಟೆಯ ಗಾತ್ರವಾಯ್ತು.

ಅದ್ಭುತ!... ಅನಿರೀಕ್ಷಿತವಾಗಿ ದೊರೆತ ಆಹಾರ...ಇಂದಿಗೆ ಇದು ಸಾಕು!...ಸತ್ವ ಕೂಡಿ ಹಾಕಿಕೊಳ್ಳಲು ಇದು ಸಾಕು. ದಳವನ್ನು ಸೇರುವವರೆಗೆ ಇದು ಸಾಕು.

ಇದು ನಿನ್ನೆಯೂ ದಿನವೇ ಸಿಗದಿದ್ದುದು ಒಳ್ಳೆಯದೇ ಆಯ್ತು. ನೆನ್ನೆ ಎಲ್ಲಾ ಏನೂ ತಿನ್ನಲಿಲ್ಲ. ನೆನ್ನೆಯೇ ಅಲ್ಲ. ಸುಮಾರು ಅರವತ್ನಾಲ್ಕು ಗಂಟೆಗಳಿಂದಲೂ ಖಾಲಿ ಹೊಟ್ಟೆಯಲ್ಲಿಯೇ ಇದ್ದೆನೋ ಏನೋ. ಹಸಿವೆಯಿಂದ ಹೊಟ್ಟೆ ಉರಿಯುತ್ತಿತ್ತು. ಕಾಲು ನೋವಿನಿಂದ ವಿಪರೀತ ಹಿಂಸೆ ಕೊಡುತ್ತಿತ್ತು. ಇಂಥ ಸಮಯದಲ್ಲಿ ಇಷ್ಟು ಆಹಾರ.. ಓಹ್!.. ನಾನೆಂಥ ಅದೃಷ್ಟವಂತ!

ಬಾರ್ಲಿ ಮುದ್ದೆಯನ್ನು ಸಣ್ಣ ಸಣ್ಣ ಉಂಡೆಗಳನ್ನು ಮಾಡಿ ಬಾಯಲ್ಲಿರಿಸಿ ಗೂಳ್ಳಲಿದ್ದೆ. ಬೆಚ್ಚಿದೆ

"ಕಾಮ್ರೇಡ್!"

ಎಲ್ಲಿಂದಲೋ ಕೇಳಿಬಂತು ಆ ಕ್ಷೀಣ ಸ್ವರ. ಆ ಕರೆಯಲ್ಲಿ ಕ್ಷೀಣತೆ ಎದ್ದು ತೋರುತಿತ್ತು. ಆಳದ ಬಾವಿಯಿಂದ ಕೂಗಿದಂತೆ ಕೇಳುತ್ತಿತ್ತು ಆ ಸ್ವರ. ಕ್ಷಣಕಾಲ ಸಂಭ್ರಮ ಆಶ್ಚರ್ಯಗಳಿಂದ ತಬ್ಬಿಬ್ಬಾದೆ. ಮರುಘಳಿಗೆಯಲ್ಲಿಯೆ ಆ ಕರೆ ಬಂದ ಕಡೆ ಕುಂಟುತ್ತಾ ನಡೆದೆ.

ಹತ್ತಿರದಲ್ಲಿಯೇ ಎರಡು ಗುಡ್ಡೆಗಳ ನಡುವೆ ಒಂದು ಗಿಡವಿತ್ತು. ಅದರ ಬುಡಕ್ಕೆ ಒರಗಿದಂತೆಯೂ ಅಲ್ಲ, ಮಲಗಿದಂತೆಯೂ ಅಲ್ಲ. ಅಂಥ ಸ್ಥಿತಿಯಲ್ಲಿ ಒಬ್ಬ ವ್ಯಕ್ತಿಯಿದ್ದ. ಆತನ ಕಾಲು ತೊಡೆಗಳು ಬದಿಯಿಂದ ತುಂಬಿ ಹೋಗಿತ್ತು. ಅವನು ಅತಿ ದೈನ್ಯಸ್ಥಿತಿಯಲ್ಲಿ ನರಳುತ್ತಿದ್ದ. ನೋಡಿದರೆ ಅವನು ಬಹಳ ಹೊತ್ತಿನಿಂದಲೂ ಸೊರಗಿದ್ದ. ಕದಲದ ಸ್ಥಿತಿಯಲ್ಲಿದ್ದ. ನನ್ನಂತೆಯೇ ದಳದಲ್ಲಿ ಸೇರದೆ ಹಿಂದುಳಿದ ಕಾಮ್ರೇಡ್ ಇರಬಹುದು. ಮಳೆಯಿಂದಾಗಿ ಕದರಿ ಹೋಗಿದ್ದ ಅವನ ತಲೆಗೂದಲು ಹಣೆಯ ಮೇಲೆ ರಟ್ಟಿನಂತೆ ಗಟ್ಟಿಯಾಗಿತ್ತು. ಗುಂಡಿಗಿಳಿದಿದ್ದ ಕಣ್ಣುಗಳು ಬಲವಾಗಿ ಮುಚ್ಚಿಕೊಳ್ಳುತ್ತಿದ್ದವು. ಒಣಗಿ ಒಡೆದಿದ್ದ ಅವನ ತುಟಿಗಳು ನಿದಾನವಾಗಿ ಬಿಡಿಸಿಕೊಳ್ಳುತ್ತಿದ್ದುವು. ನಿಸ್ಸಂದೇಹವಾಗಿ ಅವನು ರೆಡ್‌ಆರ್ಮಿಗೆ ಸೇರಿದವನೇ.

"ಕಾಮ್ರೇಡ್...!"

ಹತ್ತಿರವಾದ ನನ್ನ ಪಾದಗಳ ಧನಿಯನ್ನು ಕೇಳಿರಬಹುದು, ವಿಶ್ವ ಪ್ರಯತ್ನದಿಂದ ಅವನು ಮೆಲ್ಲಗೆ ಕಣ್ತೆರೆದ. ಎದ್ದು ಕುಳಿತುಕೊಳ್ಳುವ ವಿಫಲಯತ್ನ ಮಾಡಿದ.

ಅವನ ಸ್ಥಿತಿ ಕಂಡು ದ್ರವಿಸಿಹೋದೆ. ಕಣ್ತುಂಬಿ ಬಂತು. ದಳವನ್ನು ಬಿಟ್ಟು ಹಿಂದುಳಿದ ಈ ಮೂರು ದಿನಗಳಲ್ಲೂ, ಇಂಥ ಸ್ಥಿತಿಯಲ್ಲಿ ಸಿಕ್ಕಿದವರಲ್ಲಿ ಈ ಕಾಮ್ರೇಡ್ ಮೂರನೆಯವನು. ಆ ಇಬ್ಬರು ನನ್ನ ಕಣ್ಣಿಗೆ ಬೀಳುವ ಹೊತ್ತಿಗಾಗಲೇ ಮರಣ ಹೊಂದಿದ್ದರು.

ಅವನನ್ನು ಮೆಲ್ಲನೆ ಎಬ್ಬಿಸಿ ಕೈ ಆಸರೆಯನ್ನಿತ್ತು ನನ್ನ ಬದಿಯಲ್ಲಿ ಕೂರಿಸಿ ಕೊಂಡೆ. ಆಹಾರವಿಲ್ಲದೆ ಕೊನೆಯುಸಿರಿನಲ್ಲಿದ್ದ. ಶರೀರವೆಲ್ಲಾ ಮಂಜುಗಡ್ಡೆಯಂತೆ ಕೊರೆಯುತ್ತಿತ್ತು. ಬಲವಾಗಿ ಹಲ್ಲುಕಚ್ಚಿಕೊಂಡ. ತಕ್ಷಣ ಜೇಬಿನಿಂದ ಬಾರ್ಲಿಮುದ್ದೆಯನ್ನು ತೆಗೆದು ಅವನ ಬಾಯಿಯ ಹತ್ತಿರ ತಂದು,

"ತಿನ್ನು... ಕಾಮ್ರೇಡ್.. ತಿನ್ನು.." ಎಂದೆ.

ಪ್ರಾಣ ಹೋಗುವಂತಿದ್ದ ಕಣ್ಣಿನಿಂದ ದೀನನಾಗಿ, ಸಂಭ್ರಮದಿಂದ, ಚೈತನ್ಯ ತಂದುಕೊಂಡು ನನ್ನ ಕಣ್ಣನ್ನು ನೋಡಿದ. ಅತಿ ಪ್ರಯತ್ನದಿಂದ ಹಲ್ಲು ಕಚ್ಚಿಕೊಂಡೇ,

"ಬೇ....ಡ ಕಾಮ್ರೇಡ್? ....ನಾ ..ನು ಬದು.... ಕೊಲ್ಲ? ....ನಂಗೋಸ್ಕರ ಆಹಾರ ದಂಡ ಮಾಡ... ಬೇ....ಡ?"—ಎಂದ.

ಆ ಮಾತುಗಳು ಎಷ್ಟು ಕ್ಷೀಣವಾಗಿ ಬಂದುವೋ ನನ್ನೆದೆಯು ಅಷ್ಟೇ ದ್ರವಿಸಿ ಹೋಯ್ತು. ಕ್ಷಣಕಾಲ ಅಚೇತನನಂತೆ ನಿಂತುಬಿಟ್ಟೆ. ಎತ್ತಿದ ಕೈ ಹಾಗೇ ನಿಂತಿತು. ಅವನ ಮುಖ ಕ್ರಮೇಣ ನೀಲಿಯ ಬಣ್ಣಕ್ಕೆ ತಿರುಗುತ್ತಿತ್ತು.

ಆ ಕ್ಷಣದಲ್ಲಿ ಒಂದು ಸಣ್ಣದಾಗಿ ಬೆಂಕಿಹಾಪ ಕಾಯಿಸುವಂತಾದರೆ— ಒಂದು ಲೋಟ ಬಿಸಿನೀರು ಈ ಕಾಮ್ರೇಡಿಗೆ ಕೊಡುವಂತಾದರೆ—

ಓಹ್; ಎಷ್ಟು ಚೆನ್ನಾಗಿರುತ್ತದೆ. ಈ ಕಾಮ್ರೇಡ್ ಖಂಡಿತಾ ಚೇತರಿಸಿಕೊಳ್ಳುತ್ತಾನೆ. ಬದುಕುವುದು ಖಂಡಿತ. ಆದರೆ ಹೇಗೆ? ಹೇಗೆ? ಕಣ್ಣು ದೃಷ್ಟಿ ಹಾಯುವವರೆಗೂ ನಾಲ್ಕು ದಿಕ್ಕಿನಲ್ಲೂ ಎತ್ತೆತ್ತಲೂ ಒದ್ದೆ... ನಿರ್ಜನ ಬದಿ ಕೆಸರು...:

ಮತ್ತೇನೂ ಯೋಚಿಸದೆ ಎದ್ದು ಅವನ ಭುಜ ಹಿಡಿದುಕೊಂಡು ಎಬ್ಬಿಸಲು ಪ್ರಯತ್ನಿಸಿದೆ.

"ಏಳು ಕಾಮ್ರೇಡ್! ಹತ್ತಿರದಲ್ಲಿಯೇ ನಮ್ಮ ದಳದ ಮಜಲು ಸಿಗುತ್ತದೆ ನಿನ್ನನ್ನು ಮೆಲ್ಲಗೆ ನಡೆಸುತ್ತೇನೆ, ಏಳು ಕಾಮ್ರೇಡ್?" ಎಂದೆ.

ಅವನ ಕಣ್ಣು ಮುಚ್ಚಿಕೊಳ್ಳುತ್ತಿತ್ತು. ಒಪ್ಪದವನಂತೆ ತಲೆ ಆಡಿಸಿದ. ಶಕ್ತಿಯನ್ನೆಲ್ಲಾ ಕೇಂದ್ರೀಕರಿಸಿಕೊಳ್ಳುತ್ತಿರುವನಂತೆ ಸ್ವಲ್ಪ ತಡೆದು ಕಣ್ತೆರೆದ. ಎಡಗೈ ಎತ್ತಿ ಬಲಕಂಕುಳನತ್ತ ತೋರಿಸುತ್ತಾ ಕ್ಷೀಣ ಸ್ವರದಿಂದ...ಇಲ್ಲಿ ....ಇಲ್ಲಿ "ಎಂದು ಗೊಣಗಿದ.

ಅಲ್ಲಿ ಗಾಯವಾಗಿರಬಹುದೆಂದು ಅಂಗಿಯನ್ನು ಸರಿಸಿದೆ. ಅವನ ಅಂಗಿ ಮಾತ್ರವಲ್ಲ, ಎದೆಯ ಹತ್ತಿರವೂ ಎಲ್ಲಾ ತಣ್ಣಗೆ ಮಂಜುಗಡ್ಡೆಯಂತಾಗಿತ್ತು. ತೀವ ತಗುಲದಂತೆ ಅಲ್ಲಿ ಜತನದಿಂದಿರಿಸಿದ್ದ ಒಂದು ಸಣ್ಣ ಚೀಲ ಕಂಡುಬಂತು ಕಂಕುಳಲ್ಲಿ. ಅದನ್ನು ಹೊರ ತೆಗೆದು ಅವನ ಕೈಗಿರಿಸಿದೆ.

ಕಂಪಿಸುವ ಕೈಗಳಿಂದ ಆ ಚೀಲದೊಳಗಿನಿಂದ ಒಂದು ಕಾಗದದ ಪೊಟ್ಟಣವನ್ನು ಹೊರತೆಗೆದ. ಆ ಪೊಟ್ಟಣದಿಂದ ಕಮ್ಯೂನಿಸ್ಟ್ ಪಾರ್ಟಿಯ ಸದಸ್ಯತ್ವದ ಪುಸ್ತಕವನ್ನು ಹೊರತೆಗೆದ. ಅದರ ಪುಟಗಳ ನಡುವೆ ಕೆಲವು ಬೆಂಕಿಕಡ್ಡಿಗಳನ್ನು ಜೋಪಾನಮಾಡಿದ್ದತ್ತಿತ್ತು. ಆ ಪುಟಗಳ ಮೇಲೆ ಪಾರ್ಟಿಯ ಮುದ್ರೆ ಉದಾಬಣ್ಣದಿಂದ ಹಾಕಲ್ಪಟ್ಟಿತ್ತು. ಆ ಉದಾಬಣ್ಣದ ಮೇಲೆ ಬೆಂಕಿಕಡ್ಡಿಗಳ ಮುಂಭಾಗದ ಕೆಂಪು ಬಣ್ಣ ಕಿಡಿಗಳಂತೆ ಹೊಳೆಯುತ್ತಿದ್ದುವು!

"ನೋಡು ಕಾಮ್ರೇಡ್!—ಅವನು ನನ್ನನ್ನು ಮತ್ತಷ್ಟು ಹತ್ತಿರ ಬಾ ಎಂದು ಕರೆದ. ಕೊಕ್ಕರಿಸಿಕೊಳ್ಳುತ್ತಿದ್ದ ಬೆರಳುಗಳಿಂದ ಅವನು ಆ ಬೆಂಕಿಕಡ್ಡಿಗಳನ್ನು ಎಣಿಸಲಾರಂಭಿಸಿದ.

"ಒಂದು ಎರಡು.... ಮೂರು ನಾಲ್ಕು" ಏಳು ಬೆಂಕಿಕಡ್ಡಿಗಳಿದ್ದುವು. ಅವು ನನ್ನ ಕಣ್ಣಿಗೆ ಏಳು ಜ್ವಾಲೆಗಳಂತೆ ಹೊಳೆಯುತ್ತಿದ್ದುವು. ಅವುಗಳನ್ನು ಪೂರ್ತಿ ಲೆಕ್ಕಹಾಕುವ ಹೊತ್ತಿಗೆ ಅವನಿಗೆ ಬಹಳ ಸಮಯವೇ ಬೇಕಾಯ್ತು. ಎಣಿಸಿ ಮುಗಿಸುತ್ತಲೇ ಅವುಗಳನ್ನು ಪುಸ್ತಕದಲ್ಲಿಯೇ ಇರಿಸಿ, ಕಾಗದದಲ್ಲಿ ಸುತ್ತಿ ಚೀಲದಲ್ಲಿ ಅದನ್ನು ಭದ್ರಪಸಿದ.

ನನ್ನ ಕಣ್ಣನ್ನೇ ಪ್ರಶ್ನಾರ್ಥಕವಾಗಿ ನೋಡುತ್ತಾ,

"ಅರ್ಥವಾಯ್ತೇ? ಕಾಮ್ರೇಡ್?" —ಎಂದ.

ನಾನು ತಲೆಯಾಡಿಸಿದೆ. ಆ ವಾತಾವರಣದಲ್ಲಿ ಅದನ್ನರ್ಥಮಾಡಿಕೊಳ್ಳುವುದು ಅಂಥ ಕಷ್ಟಕರವಾದ ಕೆಲಸವಲ್ಲ. ನನ್ನ ಊಹೆಗೊಂದು ಉಜ್ವಲ ದೃಶ್ಯ ಮಿಂಚಿನಂತೆ ಹೊಳೆಯಿತು! ನಾವು ಕಾಯಿಸಿಕೊಳ್ಳಲು ಬೆಂಕಿ ಹತ್ತಿಸುತ್ತಿದ್ದೇವೆ. ಈ ಕಾಮ್ರೇಡ್ ನನ್ನೆದೆಯಲ್ಲಿ ಆಶ್ರಯ ಪಡೆದುಕೊಂಡು ಚೇತರಿಸಿಕೊಳ್ಳುತ್ತಿದ್ದ. ಇಬ್ಬರೂ ಕಲೆತು ಬೇಕಾದಷ್ಟು ಲೋಟ ಬಿಸಿ ನೀರು ಕುಡಿಯುಲಿದ್ದೇವೆ.

ಆ ಕಾಮ್ರೇಡ್ ನನ್ನ ಕೈಗಳನ್ನು ಎದೆಯ ಮೇಲಿರಿಸಿಕೊಂಡು, "ಇದು ತುಂಬಾ ಅನುಕೂಲ್ಯವಾದುದು ಗೊತ್ತೇ?"—ಎನ್ನುವಂತೆ ನನ್ನ ಕೈಯ ಹಿಡಿ ಮಡಿಸಿ ಗಟ್ಟಿಯಾಗಿ ಹಿಡಿದುಕೊಂಡ.

ನೋಟವನ್ನೆಲ್ಲಾ ನನ್ನ ಮೇಲೆ ಕೇಂದ್ರೀಕರಿಸಿ ಬಲವಂತದಿಂದ ಬಾಯ್ತೆರೆದ.

"ನೆನಪಿಂಸಿಕೋ ಕಾಮ್ರೇಡ್! ಇವು....ಇವು...ನಮ್ಮೆಲ್ಲರಿಗೂ ಸೇರಿದ್ದು ....ನಮ್ಮ ಎಲ್ಲ ಕಾಮ್ರೇಡುಗಳದು"— ಆಶಕ್ತತೆಯಿಂದ ಗೊಣಗಿದ. ಇದ್ದಕ್ಕಿದ್ದಂತೆ ಹಿಂದಿದ್ದ ಕೈ ಬಿಟ್ಟು ಬಂದು ದೀರ್ಘ ಶ್ವಾಸವೆಳೆದ. ಶಕ್ತಿಯನ್ನೆಲ್ಲಾ ಕೂಡಿಹಾಕಿಕೊಂಡು ಕೈ ಎತ್ತಿ ನನ್ನ ಮಂಡಿಗಳ ಮೇಲೆ ಆನಿಸಿ ಕೋರುಬೆರಳಿನಿಂದ ಉತ್ತರದತ್ತ ತೋರಿಸಿದ.

"ಕಾಮ್ರೇಡ್ ಒಳ್ಳೆಯದು... ಒಳ್ಳೆಯದು...ಇದನ್ನು... ಜಾಗ್ರತೆ ನಮ್ಮವರಿಗೆ ಕೊಟ್ಟುಬಿಡು...",

(7ನೇ ಪುಟ ನೋಡಿ)

ಕಾಂಗ್ರೆಸ್ ಕೃಪಾ ಛತ್ರದಲ್ಲಿ ಕೋಮುವಾದಿಗಳು

ತೆಲ್ಲಿಚೇರಿಯಿಂದ ತಿರುವನಂತಪುರದವರೆಗೆ

ದೇಶದಲ್ಲೆಲ್ಲಾ ಕೋಮು ಘರ್ಷಣೆಯ ವಿಷ ವ್ಯಾಪಿಸಿದ್ದಾಗಲೂ ಕೋಮು ಸೌಹಾರ್ದದ ವಾತಾವರಣ ಕಾಪಾಡಿಕೊಂಡ ಕೆಲವೇ ರಾಜ್ಯಗಳಲ್ಲಿ ಕೇರಳವೂ ಒಂದು. ಈ ರಾಜ್ಯದಲ್ಲಿ ಕೋಮು ಸೌಹಾರ್ದದ ಒಂದು ಉತ್ತಮ ಪರಂಪರೆಯೇ ಇದೆ. ಇಂತಹ ರಾಜ್ಯದಲ್ಲೂ ಇತ್ತೀಚೆಗೆ ಕೋಮು ಘರ್ಷಣೆ ನಡೆದಿರುವುದು ಕೋಮುವಾದೀ ಸಂಘಟನೆಗಳು ಈ ರಾಜ್ಯದಲ್ಲೂ ಕಾಲೂರಲು ಅವಕಾಶವಾಗಿರುವ ಅಪಾಯಕಾರೀ ಬೆಳವಣಿಗೆಯ ಸೂಚಕವಾಗಿದೆ.

ಡಿಸೆಂಬರ್ ೨೮ ರಂದು ಪ್ರವಾದೀ ದಿನಾಚರಣೆಯ ಸಂದರ್ಭದಲ್ಲಿ ರಾಜ್ಯಾದ್ಯಂತ ಮೆರವಣಿಗೆಗಳು ನಡೆದವು. ಎಲ್ಲಾ ಕಡೆ ದಿನಾಚರಣೆ ಶಾಂತಿಯುತವಾಗಿತ್ತು. ಆದರೆ ಅಲೆಪ್ಪಿಯಲ್ಲಿ ಪೋಲೀಸರು ಮೆರವಣಿಗೆಕಾರರ ಮೇಲೆ ಗುಂಡು ಹಾರಿಸಿದ್ದರಿಂದ ಒಬ್ಬಾತ ಕೊಲೆಯಾದ. ಎರಡೂ ಕೋಮುಗಳ ಕೋಮುವಾದಿಗಳಿಗೆ ತಮ್ಮ ವಿಷವನ್ನು ಹರಿಯಬಿಡಲು ಇದೊಂದು ಉತ್ತಮ ಅವಕಾಶವಾಗಿತ್ತು. ಡಿಸೆಂಬರ್ 30 ರಂದು ರಾಜ್ಯಾದ್ಯಂತ ಪೋಲೀಸ್ ಕ್ರಮದ ವಿರುದ್ಧ ವ್ಯಾಪಕ ಪ್ರತಿಭಟನೆ ಕಂಡು ಬಂತು. ಕೋಮುವಾದಿಗಳ ಕುಮ್ಮಕ್ಕನ್ನು ಕಡೆಗಣಿಸಿದ ಈ ಪ್ರತಿಭಟನೆಗಳು ಶಾಂತಿಯುತವಾಗಿ ನಡೆದವು. ಆದರೆ ತಿರುವನಂತಪುರದಲ್ಲಿ ಕೋಮುವಾದಿಗಳ ಕೈಮೇಲಾಯಿತು. ಮುಖ್ಯ ಮಂತ್ರಿ ಹಾಗೂ ಅವರ ಸಹೋದ್ಯೋಗಿಗಳ ಮೂಗಿನಡಿಯಲ್ಲೇ ಲೂಟಿ ಇತ್ಯಾದಿ ಅರಾಜಕ ವಾತಾವರಣ ಜನಸಾಮಾನ್ಯರನ್ನು ತಲ್ಲಣಗೊಳಿಸಿದ್ದರೂ ಪೋಲೀಸು ನಿಷ್ಕ್ರಿಯವಾಗಿ ನೋಡುತ್ತಿತ್ತು. ಇದಕ್ಕೆ ಸ್ವತಃ ಸರಕಾರದ ಆದೇಶವೇ ಕಾರಣವೆಂಬುದನ್ನು ಮುಖ್ಯ ಮಂತ್ರಿ ಕರುಣಾಕರನ್‌ರವರೇ ಒಪ್ಪಿಕೊಂಡಿದ್ದಾರೆ.

ವಿಷದ ಮೂಲ

ಕೋಮುಸೌಹಾರ್ದಕ್ಕೆ ಹೆಸರಾದ ರಾಜ್ಯದ ರಾಜಧಾನಿಯಲ್ಲೇ ಬರೋಡಾ, ಅಲೀಘಡ್, ಮುರಾದಾಬಾದನ್ನು ನೆನಪಿಸುವ ಘಟನೆಗಳೇಕೆ ನಡೆದವು ಎಂದು ಜಾತ್ಯಾತೀತ ಧೋರಣೆಯುಳ್ಳವರು ಆಶ್ಚರ್ಯಪಡಬಹುದು. ಇದನ್ನು ಅರ್ಥಮಾಡಿಕೊಳ್ಳಬೇಕಾದರೆ ಚರಿತ್ರೆಯಲ್ಲಿ ಒಂದು ದಶಕದಷ್ಟು ಹಿಂದೆ ಸರಿದು ನಾವು ನೋಡಬೇಕಾಗುತ್ತದೆ.

1972ನೇ ಇಸವಿಯ ಡಿಸೆಂಬರ್ ತಿಂಗಳಲ್ಲಿ ಉತ್ತರ ಕೇರಳದ ತೆಲ್ಲಿಚೇರಿಯಲ್ಲಿ ಒಂದು ತೀರಾ ಗಂಭೀರವಾದ ಕೋಮು ಗಲಭೆ ನಡೆಯಿತು. ಈಗಿನ ಮುಖ್ಯ ಮಂತ್ರಿಗಳು ಆಗ ಕೇರಳದ ಸಿ. ಪಿ. ಐ.(ಎಂ) ವಿರೋಧೀ ಸರಕಾರದ ಗೃಹ ಮಂತ್ರಿಗಳಾಗಿದ್ದರು. ಗೃಹ ಮಂತ್ರಿಗಳಾಗಿದ್ದರೂ ಮಂತ್ರಿ ಮಂಡಳದಲ್ಲಿ ಈಗಿನಷ್ಟೇ ಪ್ರಬಲರಾಗಿದ್ದರು. ಅವರು ಹಾಗೂ ಅವರ ಸಹೋದ್ಯೋಗಿಗಳು ಈ ಗಲಭೆಯ ಹೊಣೆಗಾರಿಕೆಯನ್ನು ಸಿ. ಪಿ. ಐ. (ಎಂ) ತಲೆಗೆ ಕಟ್ಟಲು ಯತ್ನಿಸಿದರು. ಆದರೆ ಒತ್ತಡಕ್ಕೆ ತಲೆಬಾಗಿ ಅವರು ನೇಮಿಸಬೇಕಾಗಿ ಬಂದ ನ್ಯಾಯಾಂಗ ತನಿಖೆಯ ವಿಚಾರಣೆಯ ಫಲಿತಾಂಶ ಬೇರೆಯೇ ಆಗಿತ್ತು.

ಆ ವಿಚಾರಣಾ ಆಯೋಗ ಕಂಡ ಸತ್ಯ ಹೀಗಿತ್ತು :

1. ಹಿಂದೂ ಮತ್ತು ಮುಸ್ಲಿಮರ ನಡುವೆ ಬೆಳೆದಿದ್ದ ಬಿಗಿ ವಾತಾವರಣದಲ್ಲಿ ಎಲ್ಲಾ ರಾಜಕೀಯ ಪಕ್ಷಗಳಲ್ಲಿದ್ದ ಎರಡೂ ಕೋಮಿನವರು ತಮ್ಮ ಕೋಮಿನ ಪರ ನಿಲುವು ತಳೆದಿದ್ದರು.

2. ವಾತಾವರಣದಲ್ಲಿ ಬಿಗುವು ಹೆಚ್ಚುವಲ್ಲಿ ಆರ್. ಎಸ್. ಎಸ್. ಪ್ರಮುಖ ಪಾತ್ರವಹಿಸಿತ್ತು.

3 ಕೋಮುಗಲಭೆಯ ಮೊದಲ ಹಂತದಲ್ಲಿ ಹಿಂದೂಗಳು ಆಕ್ರಾಮಕ ನಿಲುವು ತಳೆದರೆ, ಎರಡನೇ ಹಂತದಲ್ಲಿ ಮುಸ್ಲಿಮರು ಅಂತಹ ನಿಲುವು ತಳೆದರು. ಮೂರನೇ ಹಂತದಲ್ಲಿ ಆರ್. ಎಸ್. ಎಸ್. ಈ ಕ್ಷೇತ್ರದಾದ್ಯಂತ ನರಕವನ್ನೇ ಸೃಷ್ಟಿಸಿತು.

4. ಕೇವಲ ಸಿ. ಪಿ. ಐ. (ಎಂ) ಮಾತ್ರ ತನ್ನ ಪಕ್ಷದ ಬಾವುಟದೊಡನೆ ಗಲಭೆ ಪೀಡಿತ ಪ್ರದೇಶದೊಳಗೆ ಶಾಂತಿ ಹಾಗೂ ಸೌಹಾರ್ದದ ಸಂದೇಶ ಹರಡುತ್ತಿತ್ತು.

ಈ ನ್ಯಾಯಾಂಗ ತನಿಖೆಯಿಂದ ತಿಳಿದು ಬರುವ ಮುಖ್ಯ ಅಂಶವೆಂದರೆ ಆಗಿನ ಸಿ.ಪಿ.ಐ. (ಎಂ) ವಿರೋಧೀ ಸರಕಾರ ಆರ್. ಎಸ್. ಎಸ್. ನ್ನು ರಕ್ಷಿಸಲು ಯತ್ನಿಸುತ್ತಿತ್ತು ಎಂಬುದು. ಕಾಂಗ್ರೆಸ್‌ನ ಈ ನಿಲುವು ಕಳೆದ ಒಂದು ದಶಕದಲ್ಲಿ ಹಾಗೆಯೇ ಮುಂದುವರಿಯಿತು. 1980ರ ಚುನಾವಣೆಯಲ್ಲಿ ಅದು ಮೈತ್ರಿಯ ರೂಪ ಪಡೆಯಿತು. ಆರ್.ಎಸ್.ಎಸ್.—ಬಿ. ಜೆ ಪಿ ಯ ಚುನಾವಣಾ ಅಭ್ಯರ್ಥಿಗಳಿಗೆ ಕಾಂಗ್ರೆಸ್ (ಐ) ಬೆಂಬಲ ನೀಡಿರುವ ವಿಷಯ ಎಲ್ಲರಿಗೂ ತಿಳಿದಿದೆ.

ಕಾಂಗ್ರೆಸ್ (ಐ) ತನ್ನ ಸ್ವಾರ್ಥಸಿದ್ಧಿಗಾಗಿ ನೀಡಿದ ಬೆಂಬಲವನ್ನು ಪ್ರಯೋಗಿಸಿಕೊಂಡು ಆರ್. ಎಸ್. ಎಸ್. ಕೇರಳ ರಾಜ್ಯಾದ್ಯಂತ ತನ್ನ ಪ್ರಭಾವ ಹರಡಲು ಪ್ರಯತ್ನಿಸಿತು. ವಿಶ್ವ ಹಿಂದೂ ಪರಿಷತ್ತು ಇಲ್ಲೂ ಕಾಲಾಡಿಸಲಾರಂಭಿಸಿತು. ಮೇಲ್ಜಾತಿಯ ನಾಯರ್‌ಗಳ ಎನ್. ಎಸ್. ಎಸ್. ಹಾಗೂ ಅವರ ರಾಜಕೀಯ ಪಕ್ಷ [ಎನ್.ಡಿ.ಪಿ.—ಆಳುವ ರಂಗದ ಸದಸ್ಯ ಪಕ್ಷ] ಆರ್. ಎಸ್. ಎಸ್. ಚಟುವಟಿಕೆಗಳಿಗೆ ಫಲವತ್ತಾದ ಪ್ರದೇಶವಾಗಿ ದೊರೆಯಿತು. ತಿರುವನಂತಪುರ ನಾಯರ್‌ಗಳ ನೆಲೆಯಾಗಿದ್ದು ಸ್ವಾಭಾವಿಕವಾಗಿಯೆ ಆರ್. ಎಸ್. ಎಸ್. ತನ್ನ ವಿಷ ಹರಡಿಸಲು ಇದು ಸೂಕ್ತ ಸ್ಥಳವಾಯಿತು ಆದ್ದರಿಂದಲೇ ರಾಜ್ಯದ ಇತರೆಡೆ ಅಲೆಪ್ಪಿಯ ಪೋಲೀಸ್ ಗೋಳೀಬಾರಿಗೆ ಶಾಂತಿಯುತ ಪ್ರಜಾಸತ್ತಾತ್ಮಕ ವಿರೋಧ ಕಂಡು ಬಂದರೆ ತಿರುವನಂತಪುರದ ಆರ್.ಎಸ್.ಎಸ್. ಕುಮ್ಮಕ್ಕಿನಿಂದಾಗಿ ಅರಾಜಕ ವಾತಾವರಣ ಏರ್ಪಟ್ಟಿತ್ತು. ವಯಲಾರ್ ರವಿಯವರ ಪೋಲೀಸಿನ ನಿಷ್ಕ್ರಿಯತೆಯನ್ನೂ ಇದೇ ಹಿನ್ನೆಲೆಯಲ್ಲಿ ಅರ್ಥಮಾಡಿಕೊಳ್ಳಬಹುದು. ಅಲ್ಲದೆ ಹಲವು ಜಾತಿ - ಕೋಮುಗಳ ಕಲಸುಮೇಲೋಗರವಾದ ಆಳುವ ರಂಗದಲ್ಲಿ ಇತ್ತೀಚೆಗೆ ಸ್ವಾಭಾವಿಕವಾಗಿಯೇ ಮೀಸಲಾತಿಯ ವಿರುದ್ಧ ಹಾಗೂ ಪರ ಬಣಗಳು ಪರಸ್ಪರ ಕಚ್ಚಾಡುತ್ತಿದ್ದುದೂ ಈ ಪರಿಸ್ಥಿತಿಗೆ ಸಹಾಯಕವಾಯಿತು.

ದುರಂತದ ಪಾಠ

ತಿರುವನಂತಪುರದ ದುರಂತಮಯ ಘಟನೆಗಳು ವಾಸ್ತವವಾಗಿ ಈಗಿನ ಕಾಂಗ್ರೆಸ್ [ಐ] ನೇತೃತ್ವದ ಸರಕಾರ ಯಾವ ಆಧಾರದ ಮೇಲೆನಿಂತಿದೆಯೋ ಅವರ ನೇರ ಪರಿಣಾಮ ರಾಜ್ಯದ ಹಾಗೂ ದೇಶದ ಜನತೆಯ ಸಮಸ್ಯೆಗಳ ಪರಿಹಾರಕ್ಕೆ ಒಂದು ಸುಸಂಬದ್ಧವಾದ ಧೋರಣೆಯಿಲ್ಲದ ಕಾಂಗ್ರೆಸ್ [ಐ]. ವಿವಿಧ ಕೋಮುಗಳ, ಜಾತಿಗಳ ಜನವಿರೋಧೀ ನಾಯಕರನ್ನು ಅಧಿಕಾರ ಪಡೆಯಲು, ಅಧಿಕಾರ ಪಡೆದ ಮೇಲೆ ಅದನ್ನು ಉಳಿಸಿಕೊಳ್ಳಲು ಅವಲಂಬಿಸಬೇಕಾಗುತ್ತದೆ. ಇದರ ಪರಿಣಾಮವಾಗಿ ಒಂದು ದಶಕದ ಹಿಂದೆ ತೆಲ್ಲಿಚೇರಿಯಲ್ಲಿ, ಈಗ ತಿರುವನಂತಪುರದಲ್ಲಿ ನರಕ ಸೃಷ್ಟಿಯಾದರೆ ಕಾಂಗ್ರೆಸ್ಸಿಗೇನಂತೆ ! ಮಾರ್ಕ್ಸಿಸ್ಟರನ್ನು ಹೇಗಾದರೂ ಅಧಿಕಾರದಿಂದ ಹೊರಗಿಡಲು ಸಾಧ್ಯವಾದರೆ ಅಷ್ಟೇ ಸಾಕು ! ತ್ರಿಪುರಾದಲ್ಲಿ ಇತ್ತೀಚೆಗೆ ಕಾಂಗ್ರೆಸ್ [ಐ] ಮಾಡಿಕೊಂಡ ಟಿ. ಯು ಜೆ.ಎಸ್.ನಂತಹ ಪ್ರತ್ಯೇಕತಾವಾದಿ, ರಾಷ್ಟ್ರವಿರೋಧೀ ಸಂಘಟನೆಯೊಂದಿಗೆ ಮಾಡಿಕೊಂಡ ಚುನಾವಣಾ ಮೈತ್ರಿಯ ಹಿಂದಿರುವ ತರ್ಕವೂ ಇದೇ.

ಆದ್ದರಿಂದಲೇ ಸಿ. ಪಿ. ಐ. [ಎಂ]ನ ಪಾಲಿಟ್‌ಬ್ಯೂರೋ ಸಿ. ಪಿ. ಐ. [ಎಂ] ಹಾಗೂ ಇತರ ಎಡ-ಪ್ರಜಾಪ್ರಭುತ್ವವಾದೀ ಪಕ್ಷಗಳ ಮಿತ್ರರು ಮಾತ್ರವಲ್ಲ, ಕೇರಳದ ಆಳುವ ರಂಗದೊಳಗಿರುವ ಹಾಗೂ ರಾಷ್ಟ್ರದ ಇತರೆಡೆಯಲ್ಲಿರುವ ರಾಜಕೀಯ ಪಕ್ಷಗಳ ಪ್ರಜಾಪ್ರಭುತ್ವವಾದಿ ಹಾಗೂ ಜಾತ್ಯತೀತ ಮನೋಭಾವದ ಜನರು ಈ ಅಪಾಯವನ್ನು ಅರಿತುಕೊಳ್ಳಬೇಕೆಂದು ಮನವಿ ಮಾಡಿದೆ. ಕೇರಳ ಸರಕಾರ ನ್ಯಾಯಾಂಗ ವಿಚಾರಣೆ ನಡೆಸಲು ನಿರಾಕರಿಸಿ, ಪೋಲೀಸ್ ತನಿಖೆಯನ್ನಷ್ಟೇ ನಡೆಸಲಿದೆ. ಆದರೆ ನ್ಯಾಯಾಂಗ ತನಿಖೆಯಿಂದ ಮಾತ್ರ ವಾಸ್ತವತೆ ತಿಳಿದು ಬರಬಹುದಾದ್ದರಿಂದ ನ್ಯಾಯಾಂಗ ತನಿಖೆ ನಡೆಸಲೇಬೇಕೆಂದು ಒತ್ತಾಯ ತರಲು ಎಲ್ಲಾ ಜಾತ್ಯತೀತ ಮನೋಭಾವದ ಜನರು ಪ್ರಯತ್ನಿಸುವರೆಂದು ಪಾಲಿಟ್‌ಬ್ಯೂರೋ ಆಶಿಸಿದೆ.

●

ಅಮೆರಿಕಕ್ಕೆ ಬೇಡವಾಗಿರುವ ಸಾಗರ ಕಾಯಿದೆ

ಸಾಗರ ಕಾಯಿದೆಯ ಅನುಷ್ಠಾನಕ್ಕಾಗಿ ವಿಧಿ ವಿಧಾನಗಳನ್ನು ರೂಪಿಸುವ ಸಲುವಾಗಿ ರಚಿಸಿರುವ ಸಿದ್ಧತಾ ಆಯೋಗದ ಆಯವ್ಯಯಕ್ಕೆ ತನ್ನ ಪಾಲಿನ ದೇಣಿಗೆ ನೀಡದಿರುವ ರೀಗನ್ ಆಡಳಿತದ ನಿರ್ಣಯದ ಬಗೆಗೆ ವಿಶ್ವ ಸಂಸ್ಥೆ ಪ್ರಧಾನ ಕಾರ್ಯದರ್ಶಿ ಜಾವಿಯೆರ್ ಪೆರೆಝ್ ಡಿ ಕ್ಯುಲೆರ್ ಅವರು ವಿಷಾದ ವ್ಯಕ್ತಪಡಿಸಿದ್ದಾರೆ. ವಿಶ್ವಸಂಸ್ಥೆ ಪ್ರಧಾನ ಕಾರ್ಯದರ್ಶಿಯವರ ಪ್ರತಿನಿಧಿಯೊಬ್ಬರು ಸೋಮವಾರ ಇಲ್ಲಿ ಅದನ್ನು ತಿಳಿಸಿದರು.

ಮೊತ್ತಮೊದಲ ಬಾರಿಗೆ ಜಗತ್ತಿನ ಸಾಗರಗಳ ಸಂಪನ್ಮೂಲಗಳ ಬಳಕೆಗೆ ಜಾಗತಿಕ ನಿಯಮಗಳನ್ನು ರೂಪಿಸಿರುವ ಈ ಶಾಸನಕ್ಕೆ ಇದೀಗ ಕೆಲವೇ ದಿನಗಳ ಹಿಂದೆ 119 ರಾಷ್ಟ್ರಗಳು ಸಹಿಹಾಕಿವೆ. ಇದಕ್ಕೆ ಮೊದಲು ವಿಶ್ವಸಂಸ್ಥೆ ಜನರಲ್ ಅಸೆಂಬ್ಲಿ ಸಿದ್ಧತಾ ಆಯೋಗದ ಕೆಲಸ ಕಾರ್ಯಗಳಿಗೆ ಹಣಕಾಸಿನ ನೆರವು ನೀಡುವ ನಿರ್ಣಯವನ್ನು ಅಂಗೀಕರಿಸಿತು.

ಜಾಗತಿಕ ಶಾಸನವೊಂದರ ವಿರುದ್ಧ ರೀಗನ್ ಆಡಳಿತ ಕೈಗೊಂಡಿರುವ ವಿಧ್ವಂಸಕ ಕೃತ್ಯಗಳ ಸರಣಿಯಲ್ಲಿ ಈ ಆರ್ಥಿಕ ನಿರ್ಬಂಧ ಈಚಿನ ಹೊಸ ತಂತ್ರವಾಗಿದೆ. ಈ ಶಾಸನವನ್ನು ಜಗತ್ತಿನ ಎಲ್ಲ ಜನತೆಯ ಹಿತಾಸಕ್ತಿಗಳನ್ನು ಕಾಪಾಡಲು ರಚಿಸಲಾಗಿದೆ. ಆದರೆ ಜಾಗತಿಕ ಸಾಗರ ತಳದ ಅಂತರ ರಾಷ್ಟ್ರೀಯ ವಲಯಗಳಲ್ಲಿನ ಖನಿಜಗಳನ್ನು ಸೂರೆಮಾಡಲು ಬಹಳ ಹಿಂದಿನಿಂದಲೂ ಕಟಿಬದ್ಧರಾಗಿರುವ ಕೆಲ ಬಲಶಾಲಿ ಅಮೆರಿಕನ್ ಕಾರ್ಪೊರೇಶನ್‌ಗಳ ಮಂದಿಗೆ ಇದು ಸಮ್ಮತವಾಗಿಲ್ಲ. ಅದೇನಿದ್ದರೂ ಈ ಸಾಗರ ಶಾಸನ ಈ ಸಂಪನ್ಮೂಲಗಳನ್ನು "ಮಾನವ ಕುಲದ ಸಮಾನ ಒಳುವಳಿ"ಯೆಂದು ಘೋಷಿಸಿದ್ದು ಅವುಗಳ ಬಳಕೆಗೆ ನಿರ್ದಿಷ್ಟ ನಿಯಮಗಳನ್ನು ರೂಪಿಸಿದೆ.

ಒಟ್ಟಿನಲ್ಲಿ ಸಾಗರ ಸಂಪನ್ಮೂಲಗಳ ಮೇಲೆ ಸಾರ್ವತ್ರಿಕವಾಗಿ ಅಂಗೀಕೃತವಾದ ಕಾಯಿದೆಗಳ ಹಿಡಿತವಿರಬೇಕೇ ಹೊರತು "ಬಲಿಷ್ಠರ ಹಕ್ಕು"ಲ್ಲ ಎಂಬುದು ಜಾಗತಿಕ ಸಮುದಾಯದ ಅಭಿಪ್ರಾಯವಾಗಿದೆ. ಆದರೆ ರೀಗನ್ ಆಡಳಿತದ ದೃಷ್ಟಿಯಲ್ಲಿ ಅಂತರ ರಾಷ್ಟ್ರೀಯ ಕಾಯಿದೆಯ ನಿಯಮಾವಳಿಗಳಿಗೂ ವಾಷಿಂಗ್ಟನ್‌ನ ಸಾಮ್ರಾಜ್ಯಶಾಹಿ ವಾದಗಳಿಗೂ ಪರಸ್ಪರ ವಿರೋಧ ಕಂಡುಬಂದರೆ ಅಲಕ್ಷಿಸಲ್ಪಡುವುದು ಅಂತರರಾಷ್ಟ್ರೀಯ ನಿಯಮಗಳೇ ಆಗಿವೆ.

○

ಸಿ.ಐ.ಟಿ.ಯು. ಜನರಲ್ ಕೌನ್ಸಿಲ್ ಸಭೆ

ಸಿ ಐ.ಟಿ.ಯು. ಜನರಲ್ ಕೌನ್ಸಿಲ್ ಸಭೆಯು 1983ರ ಜನವರಿ 21 ರಿಂದ 23ರ ವರೆಗೆ ಪಶ್ಚಿಮ ಬಂಗಾಳದ ಹೂಗ್ಲಿ ಜಿಲ್ಲೆಯಲ್ಲಿರುವ 'ಹಿಂದ್ ಮೋಟಾರ್ಸ್' ನಗರದಲ್ಲಿ ನಡೆಯುತ್ತದೆ.

ಈ ನಗರವು ಹೌರಾ ರೈಲ್ವೇ ನಿಲ್ದಾಣದಿಂದ 20 ಕಿ.ಮೀ. ದೂರದಲ್ಲಿದೆ. ಸಿ. ಐ. ಟಿ. ಯು. ಜನರಲ್ ಕೌನ್ಸಿಲ್ ಸದಸ್ಯರು ಸಭೆಯ ಮುಂದೆ ಬರುವ ದಸ್ತಾವೇಜುಗಳನ್ನು ಅಭ್ಯಾಸ ಮಾಡಲು ಜನವರಿ 20 ರಂದೇ 'ಹಿಂದ್ ಮೋಟಾರ್ಸ್' ನಗರವನ್ನು ತಲುಪಬೇಕೆಂದು ಸಿ. ಐ. ಟಿ. ಯು. ಕೇಂದ್ರವು ತಿಳಿಸಿದೆ.

ಈ ಸಭೆಯಲ್ಲಿ ಸಿ. ಐ. ಟಿ. ಯು. ಅಖಿಲ ಭಾರತ ಸಮ್ಮೇಳನದ ಪ್ರತಿನಿಧಿಗಳ ಸಂಖ್ಯೆಯನ್ನು, ಸಮ್ಮೇಳನದ-ಸ್ಥಳ ಮತ್ತು ತಾರೀಕುಗಳನ್ನು ನಿರ್ಧರಿಸಲಾಗುತ್ತದೆ.

ಸಭೆಯು ಸೆಪ್ಟೆಂಬರ್ 7 ರಂದು ನಡೆದ ಯುದ್ಧ ವಿರೋಧೀ ದಿನ, ದೇಶದ ನಾನಾ ಭಾಗಗಳಲ್ಲಿ ಬರಗಾಲ, ಚಂಡಮಾರುತ, ಪ್ರವಾಹಗಳಿಂದ ಹಾನಿಗೀಡಾಗಿರುವ ಪ್ರದೇಶಗಳಲ್ಲಿ ಕಾರ್ಮಿಕ ವರ್ಗದ ಕರ್ತವ್ಯ ಮೊದಲಾದ ವಿಷಯಗಳನ್ನು ಪರಿಶೀಲಿಸುತ್ತದೆ.

ಸಿ.ಐ.ಟಿ.ಯು. ಕಾರ್ಯಕಾರೀ ಸಮಿತಿಯು ಜನವರಿ 21ರ ಬೆಳಗ್ಗೆ 9 ಗಂಟೆಗೆ ಸೇರುತ್ತದೆ.

ಇಂದಿರಾ ಭದ್ರಕೋಟೆಗಳು ಕುಸಿದುಬಿದ್ದಿವೆ

(3ನೇ ಪುಟದಿಂದ)

ಈ ಎರಡೂ ರಾಜ್ಯಗಳ ಚುನಾವಣೆಯಿಂದ ಒಂದು ವಿಷಯವನ್ನು ಗಮನಿಸುವುದು ಅತ್ಯಗತ್ಯ. ಈ ಎರಡೂ ರಾಜ್ಯಗಳಲ್ಲಿ ಇಂದಿರಾ ಗಾಂಧಿ ಪಕ್ಷ ಎದುರಿಸಿದ ಸೋಲು ಭಾರತದ ರಾಜಕೀಯ ಭವಿಷ್ಯದ ಮೇಲೆ ಒಳ್ಳೇ ಪರಿಣಾಮ ಬೀರುವುದರಲ್ಲಿ ಸಂಶಯವಿಲ್ಲ. 1977ರಲ್ಲಿ ಅಂಥ ಅವಕಾಶ ಸಿಕ್ಕಿತ್ತು. ಆದರೆ ಜನತಾ ಪಾರ್ಟಿ ಆ ಅವಕಾಶವನ್ನು ಉಳಿಸಿಕೊಳ್ಳಲಿಲ್ಲ. ಆ ಕಾಲದಲ್ಲೂ ಇಂದಿರಾ ಗಾಂಧಿಯು ಕೈಬಿಡದ ಈ ಎರಡು ರಾಜ್ಯಗಳ ಜನತೆ ದೇಶದ ಇತರರ ರಾಜ್ಯಗಳ ಜನ ಸಮೂಹದ ಪ್ರವಾಹದಲ್ಲಿ ವಿಲೀನಗೊಳ್ಳಲು ಸಿದ್ಧರಾಗಿರುವುದು ಒಂದು ವಿಶಿಷ್ಟ ಬದಲಾವಣೆಯಾಗಿದೆ. ಇಂಥ ಬದಲಾವಣೆಗಾಗಿ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಾರ್ಟಿ ಬಹಳ ಶ್ರಮಿಸುತ್ತ ಬಂದಿದೆ.

ರಾಜಕೀಯದಲ್ಲಿ. ಏಕವ್ಯಕ್ತಿಯ ಪ್ರಭಾವ ಕೊನೆಗೊಳಿಸುವುದು ಅತ್ಯಗತ್ಯ. ಆ ದಿಸೆಯಲ್ಲಿ ಆಂಧ್ರ-ಕರ್ನಾಟಕ ರಾಜ್ಯಗಳ ಚುನಾವಣೆ ಮಹತ್ವದ ಘಟನೆಯೆಂದೇ ಹೇಳಬೇಕಾಗಿದೆ. ಪಶ್ಚಿಮ ಬಂಗಾಲ, ತ್ರಿಪುರಗಳಲ್ಲಿ ಎಡ ಶಕ್ತಿಗಳು ಧ್ರುವೀಕರಣ ಹೊಂದಿ, ಭದ್ರವಾದ ಎಡರಂಗ ರಚಿಸಲ್ಪಟ್ಟಿದೆ. ಆ ಎರಡು ರಾಜ್ಯಗಳಲ್ಲಿ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಾರ್ಟಿ ಬಲಿಷ್ಠವಾಗಿರುವುದೇ ಮುಖ್ಯ ಕಾರಣ. ದೇಶದ ಇತರೆಡೆಗಳಲ್ಲಿ ಇಂದಿರಾ ಕಾಂಗ್ರೆಸ್ ಪ್ರಭಾವ ಕುಸಿಯುತ್ತಿತ್ತಿದ್ದರೂ ಬಂಡವಾಳಶಾಹಿ ನೀತಿಯ ಅನುಕರಣೆಯ ಪಕ್ಷಗಳು ಅಧಿಕಾರಕ್ಕಾಗಿ ಪೈಪೋಟಿ ನಡೆಸುತ್ತಿವೆ. ವಿಫಲಗೊಳ್ಳುತ್ತಿವೆ. ಆ ಪ್ರದೇಶದಲ್ಲಿ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಾರ್ಟಿಯ ಪ್ರಭಾವ ಕಡಿಮೆಯಾಗಿದೆ.

ಕರ್ನಾಟಕದಲ್ಲಿ ಸಿ. ಪಿ. ಐ. ಮತ್ತು ಸಿ.ಪಿ.ಐ. (ಎಂ) ಪಕ್ಷಗಳ ಮೇಲೆ ಹೆಚ್ಚಿನ ಜವಾಬ್ದಾರಿ ಇದೆ. ಗುಂಡೂರಾವ್ ಸರಕಾರದ ದುರಾಡಳಿತ, ದಬ್ಬಾಳಿಕೆ ಒಂದು ಕಡೆ, ಅದರ ವಿರುದ್ಧ ಸಿ.ಪಿ.ಐ. (ಎಂ), ಸಿ.ಪಿ.ಐ., ಕ್ರಾಂತಿರಂಗ, ಜನತಾ ಪಾರ್ಟಿಗಳನ್ನು ಒಂದೆಡೆ ಸೇರಿಸಿ ನಡೆಸಿದ ಐಕ್ಯ ಹೋರಾಟ. ಈ ಕಾರಣದಿಂದಲೇ ಇಂದಿರಾ ಗಾಳಿಯಿಂದ ಕರ್ನಾಟಕವನ್ನು ಉಳಿಸಲು ಸಾಧ್ಯವಾಗಿದೆ. ಜನತಾ ಪಾರ್ಟಿ-ಕ್ರಾಂತಿರಂಗಗಳಿಗೂ ಕಾರ್ಯಕ್ರಮಗಳ ತಳಹದಿಯ ಧೋರಣೆಗಳಿಲ್ಲೆಂದು ಎಲ್ಲರಿಗೂ ಗೊತ್ತು. ಇವರೆಲ್ಲ ಕಾಂಗ್ರೆಸ್ಸಿನ ಪರಂಪರೆಯಲ್ಲೇ ಬೆಳೆದು ಬಂದವರು. ಯಾವಾಗ ಎಂಥ ಬಣ್ಣ ಬಳೆದುಕೊಳ್ಳುತ್ತಾರೆಂದು ಹೇಳುವುದು ಕಷ್ಟ. ಆದರೆ ಜನ ಜಾಗೃತಗೊಂಡಿದ್ದಾರೆ, ತಪ್ಪು ಮಾಡಿದ್ದಾದರೆ ತಮಗೂ ಕಾಂಗ್ರೆಸ್ಸಿನ ಗತಿಯಾಗುತ್ತದೆಂಬ ಅರಿವು ಇವರಲ್ಲುಂಟಾಗಿರಬೇಕೆಂದು ಆಶಿಸಬೇಕಷ್ಟೆ.

ಆದ್ದರಿಂದ ಜನತಾ ಕ್ರಾಂತಿರಂಗ ಗುಂಪಲ್ಲಿ ಹೊಂದಾಣಿಕೆ ಮಾಡಿಸಿ, ಸ್ವಚ್ಛ ಆಡಳಿತೆಯನ್ನು ಜನರಿಗೆ ನೀಡುವಂತೆ ಮಾಡುವ ಜವಾಬ್ದಾರಿಯನ್ನು ಸಿ. ಪಿ. ಐ. (ಎಂ), ಸಿ. ಪಿ. ಐ. ಪಕ್ಷಗಳೂ, ಜನತಾ-ಕ್ರಾಂತಿರಂಗಗಳಲ್ಲಿರುವ ವಿಚಾರವಂತರೂ ಹೊರಬೇಕಾಗಿದೆ. ಇಲ್ಲವಾದರೆ ಜನತೆ ಇಂದಿರಾ ಕಾಂಗ್ರೆಸ್ಸಿಗೆ ಮಾಡಿದ ಮಂಗಳಾರತಿಯನ್ನೇ ಜನತಾ-ಕ್ರಾಂತಿರಂಗದ ಸರಕಾರಕ್ಕೂ ಮಾಡುತ್ತಾರೆಂಬುದನ್ನು ಮರೆಯಬಾರದು.

○

ಹೂವಿನ ಹಡಗಲಿ :

ಎಸ್.ಎಫ್.ಐ.ನ ೧೨ನೇ ವಾರ್ಷಿಕೋತ್ಸವ

ದಿನಾಂಕ 30-12-82 ರಂದು ಇಲ್ಲಿನ ಎಸ್.ಎಫ್.ಐ.ನ ಘಟಕವು ತನ್ನ ಹನ್ನೆರಡನೇ ವಾರ್ಷಿಕೋತ್ಸವವನ್ನು ವಿಜೃಂಭಣೆಯಿಂದ ಆಚರಿಸಿತು. ಬೆಳಿಗ್ಗೆ 8 ಗಂಟೆಗೆ ಕಾಲೇಜಿನ ಆವರಣದಿಂದ ಹೊರಟ 400ಕ್ಕೂ ಹೆಚ್ಚಿನ ವಿದ್ಯಾರ್ಥಿಗಳ ಮೆರವಣಿಗೆಯು ಊರಿನ ಪ್ರಮುಖ ಬೀದಿಗಳಲ್ಲಿ ಎಸ್.ಎಫ್.ಐ.ನ ಘೋಷಣೆಗಳನ್ನು ಮೊಳಗಿಸಿತು. ನಂತರ ಶ್ರೀ ಸೊ|| ಮಲ್ಲಪ್ಪ ಕಲ್ಯಾಣ ಮಂಟಪದಲ್ಲಿ ಸಭೆ ಸೇರಿತು. ಜಿಲ್ಲಾ ಸಂಚಾಲಕಿಯಾದ ಕಾಂ| ಶಾಂತ ಕುಮಾರಿಯವರು ಧ್ವಜಾರೋಹಣ ನೆರವೇರಿಸಿ ಎಸ್. ಎಫ್. ಐ. ಗಾಗಿ ಹುತಾತ್ಮರಾದ ಸಂಗಾತಿಗಳಿಗೆ ಶ್ರದ್ಧಾಂಜಲಿಯನ್ನು ಅರ್ಪಿಸಿದರು. ನಂತರ ವಿದ್ಯಾರ್ಥಿಗಳ ಸಂಘಟನೆಯ ಅಗತ್ಯತೆಯ ಬಗ್ಗೆ ಎಸ್.ಎಫ್.ಐ. ನಿಲುವುಗಳ ಬಗ್ಗೆ ಮಾತನಾಡಿದರು. ವಿದ್ಯಾರ್ಥಿಗಳಿಗೆ ಸಿಹಿ ಹಂಚುವುದರೊಂದಿಗೆ ಕಾರ್ಯಕ್ರಮವು ಮುಕ್ತಾಯಗೊಂಡಿತು.

ಸಾಯಂಕಾಲ 4-30 ಗಂಟೆಗೆ ಬಹಿರಂಗ ಸಭೆಯನ್ನು ಏರ್ಪಡಿಸಲಾಗಿತ್ತು. ಈ ಸಭೆಗೆ ಅಧ್ಯಕ್ಷರಾಗಿ ಸ್ಥಳೀಯ ಕಾಲೇಜಿನ ಅರ್ಥಶಾಸ್ತ್ರದ ಉಪನ್ಯಾಸಕರಾದ ಶ್ರೀ ಹಿ. ಮ. ಗುರುಬಸವರಾಜ್‌ರವರು ಆಗಮಿಸಿದ್ದರು. ಮುಖ್ಯ ಭಾಷಣಕಾರರಾಗಿ ಆಗಮಿಸಿದ್ದ ಹರಪನಹಳ್ಳಿ ಎ.ಡಿ.ಬಿ ಕಾಲೇಜಿನ ಇಂಗ್ಲೀಷ್ ಉಪನ್ಯಾಸಕರಾದ ಕಾಂ| ಗುಡಿಹಳ್ಳಿ ನಾಗರಾಜ್‌ರವರು "ವಿದ್ಯಾರ್ಥಿಗಳಲ್ಲಿ ವೈಜ್ಞಾನಿಕ ದೃಷ್ಟಿಕೋನ" ಎಂಬ ವಿಷಯದ ಬಗ್ಗೆ ಮಾತನಾಡಿದರು.

ನಂತರ ಅಂತಿಮವಾಗಿ ಕಾಂ| ಎಸ್. ಕಮಲರವರು ವಂದನಾರ್ಪಣೆ ಮಾಡಿದರು.

●

ನೆರೆ ಹೊರೆ

(4ನೇ ಪುಟದಿಂದ)

ಕೆಂಪು ಬ್ಯಾನರುಗಳನ್ನು ಹಿಡಿದುಕೊಂಡು ತಮ್ಮ ಬೇಡಿಕೆಗಳ ಘೋಷಣೆಗಳನ್ನು ಮಾತ್ರವಲ್ಲ, ಪಂಜಾಬೀ ಜನತೆಯ ಒಗ್ಗಟ್ಟಿನ ಘೋಷಣೆಗಳನ್ನು, ಎಲ್ಲಾ ಬಣ್ಣದ ಕೋಮುವಾದಿಗಳನ್ನು, ಪ್ರತ್ಯೇಕತಾವಾದಿಗಳನ್ನು ಖಂಡಿಸುವ, ಅಕಾಲಿದಳದೊಡನೆ ಕೇಂದ್ರ ಸರಕಾರ ತಕ್ಷಣ ಮಾತುಕತೆ ನಡೆಸಬೇಕೆಂಬ, ಪಂಜಾಬೀ ಜನತೆಯ ಪ್ರಜಾಪ್ರಭುತ್ವ ಬೇಡಿಕೆಗಳನ್ನು ಮನ್ನಿಸಬೇಕೆಂಬ ಘೋಷಣೆಗಳನ್ನು ಅಷ್ಟೇ ವೀರಾವೇಶದಿಂದ ಕೂಗುತ್ತಿದ್ದುದು ಕಂಡು ಬಂದಿತು.

●

ತಮಿಳುನಾಡು :

ಎಂ.ಜಿ.ಆರ್. ಸರ್ಕಾರದ ಮುಷ್ಕರ ಪ್ರತಿಬಂಧಕ ಸುಗ್ರೀವಾಜ್ಞೆಗೆ ತೀವ್ರ ಪ್ರತಿಭಟನೆ

ಸಂಸತ್ತಿನ ಒಳಗೆ, ಹೊರಗೆ ಕಾಂಗ್ರೆಸ್‌ನ ಬಾಲಹಿಡಿಯುತ್ತಿರುವ ಎ.ಐ.ಎ.ಡಿ.ಎಂ.ಕೆ ಯ ಎಂ.ಜಿ.ಆರ್. ಸರಕಾರ ತನ್ನ ಧೋರಣೆಗಳಲ್ಲಿ ಕಾಂಗ್ರೆಸ್ (ಐ) ನೊಂದಿಗೆ ಪೈಪೋಟಿ ಆರಂಭಿಸಿದೆ. ನವೆಂಬರ್ ಕೊನೇ ಭಾಗದಲ್ಲಿ ಮುಷ್ಕರಗಳನ್ನು ಪ್ರತಿಬಂಧಿಸಲು, ಮುಷ್ಕರ ನಡೆಸುವ ಅಥವಾ ಅದನ್ನು ಬೆಂಬಲಿಸುವವರನ್ನು ಜೈಲಿಗೆ ತಳ್ಳಲು ರಾಜ್ಯ ಸರಕಾರಕ್ಕೆ ಅಧಿಕಾರ ನೀಡುವ ವಿಶೇಷಾಜ್ಞೆಯನ್ನು ಹೊರಡಿಸಲಾಗಿದೆ. ಇದನ್ನು ಪ್ರತಿಭಟಿಸಿ ಡಿಸೆಂಬರ್ 22 ರಂದು ರಾಜ್ಯಾದ್ಯಂತ ತೀವ್ರ ಪ್ರತಿಭಟನೆ ವ್ಯಕ್ತವಾಯಿತು. ಭಾರೀ ಸಭೆ, ಮೆರವಣಿಗೆ, ಪ್ರದರ್ಶನಗಳ ಮೂಲಕ ತಮಿಳುನಾಡಿನ ಕಾರ್ಮಿಕರು ಎಂ.ಜಿ.ಆರ್. ಸರಕಾರದ ಕಾರ್ಮಿಕ ವಿರೋಧೀ ನೀತಿಗೆ ತಮ್ಮ ಧಿಕ್ಕಾರವನ್ನು ಸ್ಪಷ್ಟವಾಗಿ ವ್ಯಕ್ತಗೊಳಿಸಿದರು.

ಡಿಸೆಂಬರ್ 5 ರಂದು ಆಳುವ ಪಕ್ಷಕ್ಕೆ ಸೇರಿದ ಕಾರ್ಮಿಕ ಸಂಘ ಬಿಟ್ಟು ಉಳಿದೆಲ್ಲಾ ಕಾರ್ಮಿಕ ಸಂಘಗಳು ಒಟ್ಟು ಸೇರಿ ರಚಿಸಿಕೊಂಡ ಜಂಟಿ ಕ್ರಿಯಾ ಸಮಿತಿ ಈ ಸಭೆ, ಮೆರವಣಿಗೆಗಳನ್ನು ಸಂಘಟಿಸಿತ್ತು.

ಬೆಂಕಿ ಕಿಡಿಗಳು

(5ನೇ ಪುಟದಿಂದ)

ಆ ಮಾತು ಹಾಗೇ ನಿಂತಿತು. ಅವನ ತಲೆ ಪಕ್ಕಕ್ಕೆ ಹೊರಳಿತು. ಕಣ್ಣು ಮುಚ್ಚಿಹೋಯ್ತು. ಅವನು ಕೊನೆಯ ಉಸಿರೆಳೆದ.

ನಾನು ಒಂಟಿಯಾದೆ. ಕಣ್ಣು ಮಂಜಾದಂತಾಯ್ತು. ಅನಂತವಾಗಿ ಹರಡಿಕೊಂಡಿದ್ದ ಕೆಸರು ನೆಲ. ಅದರ ಮೇಲೆ ತಿವಾಸಿ ಹರಡಿದಂತಿದ್ದ ಹುಲ್ಲು! ಅದರ ಮೇಲೆ ಅಲ್ಲಲ್ಲಿ ವಜ್ರವನ್ನು ಚಲ್ಲಿದಂತಿದ್ದ ಮಂಜಿನ ಹನಿಗಳು. ಮೇಲೆ ನೀಲಾಕಾಶ. ಕೆಳಗೆ ನನ್ನ ತೊಡೆಯ ಮೇಲೆ ನೀಲಿಯ ಬಣ್ಣಕ್ಕೆ ತಿರುಗಿ ಮಲಗಿದ್ದ ಕಾಮ್ರೇಡ್ ಎಲ್ಲವೂ ಆ ಮಂಜಿನ ತೆರೆಯಲ್ಲಿ ಒಂದಾಗಿ ಕಾಣುತ್ತಿದ್ದವು.

ನನ್ನ ಮೊಣಕಾಲ ಮೇಲೆ ಊರಿದ್ದ ಆ ಕಾಮ್ರೇಡ್‌ನ ಕೈ ಒಂದೇ.. ಮಾರ್ಗದರ್ಶನ ಮಾಡುತ್ತಿರುವಂತಿದ್ದ ಆ ಕೈ ಒಂದೇ. ಲಾಂಗ್‌ಮಾರ್ಚ್ ಸಾಗಿ ಹೊದ ದಿಕ್ಕಿನತ್ತ ತೋರಿಸುತ್ತಿದ್ದ ಆ ಕೈ ಒಂದೇ... ನನ್ನ ದೃಷ್ಟಿಗೆ ಬೀಳುತ್ತಿತ್ತು.

ಆ ಕಾಮ್ರೇಡ್ ಕೊಟ್ಟ ಪ್ರೋತ್ಸಾಹದಿಂದ ಉತ್ಸಾಹಗೊಂಡು ಅನಾಲೋಚನನಾಗಿ ವೇಗದಿಂದ ಹೊರಟು ಅಂದು ಸಂಜೆ ಕತ್ತಲಾಗುವ ಹೊತ್ತಿಗೆ ನಮ್ಮ ದಳದ ಹಿಂದಿನ ಗುಂಪನ್ನು ತಲುಪಿದೆ.

ಮುಂದಿನ ಕೆಲವೇ ಕ್ಷಣಗಳಲ್ಲಿ ಕತ್ತಲೆಯ ತೆರೆಯನ್ನು ಹರಿದುಕೊಂಡು ಒಂದು ದೊಡ್ಡ ಉರಿ ಮೇಲೆದ್ದಿತು. ಕೆಲವು ದಿನಗಳಿಂದಲೂ ಮಳೆಯಲ್ಲಿ ತೋಯುತ್ತಾ, ಕೆಸರಿನಲ್ಲಿ ನೆನೆಯುತ್ತಾ, ಚಳಿಗಾಳಿಗೆ ಮೈ ಸೆಟೆಯುವಂತಿದ್ದರೂ ಭಾರವಾದ ಮೈಹೊತ್ತು ಪಯಣಿಸುತ್ತಿದ್ದ ನಮ್ಮ ದಳದ ಯೋಧರಲ್ಲಿ ನಗುನಗುತಾ ಆ ಅಗ್ನಿಕುಂಡದ ಸುತ್ತ ಸೇರಿ ನವಜೀವನಕ್ಕೆ ನಾಂದಿ ಹಾಡುತ್ತಿದ್ದರು. ಒದ್ದೆಯಾಗಿದ್ದ ಬಟ್ಟೆಗಳು ಒಣಗುತ್ತಿದ್ದವು. ಸೆಟೆದುಕೊಂಡಿದ್ದ ಮೈ ಕೈ, ಬಿಸಿ ಸೋಕಿ ದೂರವಾಗುತ್ತಿದ್ದವು. ಕಾಡು ಗೆಣಸುಗಳು ಬೇಯುತ್ತಿದ್ದುವು. ಎಲ್ಲರೂ ಉತ್ಸಾಹಪೂರಿತರಾಗಿದ್ದರು.

ನಾನು ನಮ್ಮ ದಳಪತಿಯಲ್ಲಿಗೆ ಹೋಗಿ ವರದಿಯೊಪ್ಪಿಸಿದೆ! ಆ ಕಾಮ್ರೇಡ್ ಕೊಟ್ಟ ಚೀಲವನ್ನು ಜೇಬಿನಿಂದ ತೆಗೆದು ಕೊಟ್ಟೆ. ತುಸು ಅಂತರದಲ್ಲಿ ಧಗಧಗನೆ ಉರಿಯುತ್ತಿದ್ದ ಬೆಂಕಿಯ ಉರಿ ಕಾಂತಿಯ ಅಲೆಗಳಂತೆ ನೃತ್ಯವಾಡುತ್ತಿದ್ದುವು. ವಿಷಯವನ್ನೆಲ್ಲಾ ಕೇಳಿದ ದಳಪತಿ ಚೀಲದಿಂದ ಪುಸ್ತಕ ತೆಗೆದುಕೊಂಡು ವಿಷಾದಪೂರಿತ ಮುಖದಿಂದ ಕಂಪಿಸುವ ಕೈಗಳಿಂದ ಆ ಪುಸ್ತಕದಲ್ಲಿನ ಬೆಂಕಿ ಕಡ್ಡಿಗಳನ್ನು ಎಣಿಸಲಾರಂಭಿಸಿದ.

"ಒಂದು ಎರಡು....ಮೂರು.... ನಾಲ್ಕು...ಐದು...ಆರು..."

ಆ ಆರು ಬೆಂಕಿಯ ಕಡ್ಡಿಗಳಿಗೂ ಇದ್ದ ಕೆಂಪನೆಯ ಮುಂಭಾಗ ನೃತ್ಯ ಮಾಡುತ್ತಿರುವಂತೆ ಆ ಬೆಳಕಿನಲ್ಲಿ ಆರು ಬೆಂಕಿಯ ಕಿಡಿಗಳಂತೆ ಹೊಳೆಯುತ್ತಿದ್ದವು.

[ದಾಕ್ಷಾಯಿಣಿ ಪ್ರಕಾಶನ, ಮಲ್ಲೇಶ್ವರಂ, ಬೆಂಗಳೂರು, ಪ್ರಕಟಿಸಿರುವ ಬದಲಾವಣೆ ಕಥಾ ಸಂಕಲನದಿಂದ ಈ ಕಥೆಯನ್ನು ಆರಿಸಲಾಗಿದೆ]

ಕೋಮುವಾದಿಗಳಿಂದ ಕೊಲೆಯಾದ ಕವಿ

ಕೋಮು ಸೌಹಾರ್ದ ಮತ್ತು ಜಾತ್ಯಾತೀತ ಭಾವನೆಯ ಪ್ರತಿಪಾದಕ 38 ವರ್ಷದ ತೆಲುಗು ಕವಿ ಗುಲಾಂ ಯಾಸಿನ್ ಅವರು ಜನವರಿ ಹತ್ತರಂದು ಕೋಮು ಪ್ರಚೋದಕ ಶಕ್ತಿಗಳಿಂದ ಕೊಲೆಗೀಡಾದರು.

ಕೋಮುವಾದಿಗಳು ಯಾಸಿನ್ ಅವರ ಪತ್ನಿ ಮತ್ತು ಪುತ್ರನನ್ನು ಸಹ ಕೊಲೆ ಮಾಡಿದ್ದಾರೆ.

●

ಶ್ರದ್ಧಾಂಜಲಿ

ದಿನಾಂಕ 5-1-82 ರಂದು ನಡೆದ ಕಾರು ಅಪಘಾತವೊಂದರಲ್ಲಿ ಭಾರತ ಕಮ್ಯುನಿಸ್ಟ್ ಪಕ್ಷದ ತಮಿಳುನಾಡಿನ ಸೇಲಂ ಜಿಲ್ಲಾ ಕಾರ್ಯದರ್ಶಿ ಕಾಂ| ಅರ್ಧನಾರೀ ವಾದಿಯಾರ್ ಅವರು ಮೃತ ಮೃತಪಟ್ಟಿದ್ದಾರೆ. ಇವರೊಂದಿಗಿದ್ದ ಸಿ. ಪಿ. ಐ. ನ ಮುಖಂಡ ಹಾಗೂ ಸಂಸತ್ ಸದಸ್ಯ ಕಾಂ| ಕಲ್ಯಾಣ ಸುಂದರಮ್‌ಅವರು ತೀವ್ರವಾಗಿ ಗಾಯಗೊಂಡಿದ್ದಾರೆ.

ಸಿ.ಪಿ.ಐ. ಮುಖಂಡರ ಮರಣಕ್ಕೆ ಸೇಲಂ ಜಿಲ್ಲಾ ಮಾರ್ಕ್ಸ್‌ವಾದೀ ಕಮ್ಯುನಿಸ್ಟ್ ಪಕ್ಷ ತನ್ನ ಶ್ರದ್ಧಾಂಜಲಿ ಸಲ್ಲಿಸಿದೆ.

○

ಫೆಬ್ರವರಿಯಲ್ಲಿ

ಅಸ್ಸಾಂ ಮತ್ತು ಮೇಘಾಲಯಗಳಲ್ಲಿ ಸಾರ್ವತ್ರಿಕ ಚುನಾವಣೆ

ಅಸ್ಸಾಂ ಮತ್ತು ಮೇಘಾಲಯಗಳಲ್ಲಿ ಮುಂದಿನ ತಿಂಗಳು ವಿಧಾನ ಸಭಾ ಹಾಗೂ ಲೋಕಸಭಾ ಚುನಾವಣೆಗಳನ್ನು ನಡೆಸಲಾಗುವುದೆಂದು ಚುನಾವಣಾ ಆಯೋಗ ಪ್ರಕಟಿಸಿದೆ. ಚುನಾವಣಾ ದಿನಾಂಕಗಳನ್ನು ಸಹ ಆಯೋಗವು ಪ್ರಕಟಿಸಿದೆ. ಈ ಪ್ರಕಾರ ಅಸ್ಸಾಂನಲ್ಲಿ ಫೆಬ್ರವರಿ 14, 17 ಮತ್ತು 20 ರಂದು ಮತ್ತು ಮೇಘಾಲಯದಲ್ಲಿ ಫೆಬ್ರವರಿ 17 ರಂದು ಚುನಾವಣೆ ನಡೆಯಲಿದೆ.

ಬೂಟಾಸಿಂಗರ ಬೂಟಾಟಿಕೆ

(1ನೇ ಪುಟದಿಂದ)

ಕೋಲಿಸಿದ್ದಾರೆ. ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಾರ್ಟಿ ಮುಖಂಡರಾದ ಕಾಂ| ಬಿ. ಟಿ. ರಣದಿವೆಯವರು ಗುಡಿಬಂಡಾದಲ್ಲಿ ಮಾಡಿದ ತಮ್ಮ ಭಾಷಣದಲ್ಲಿ "ಗುಂಡೂರಾಯರು ಪೋಲೀಸರ ಗುಂಡಿನಿಂದ ಜನರನ್ನು ಕೊಂದಿದ್ದಾರೆ. ನೀವು ನಿಮ್ಮ ಓಟಿನಿಂದ ಅವರ ಸರಕಾರವನ್ನು ಕೊಲ್ಲಿರಿ." ಎಂದು ಕರೆ ಕೊಟ್ಟಿದ್ದರು. ಅದರಂತೆಯೇ ಕರ್ನಾಟಕದ ಮತದಾರರು ತಮ್ಮ ಮತದಿಂದ ಕಾಂಗ್ರೆ ಪಕ್ಷವನ್ನು ಸೋಲಿಸಿದ್ದಾರೆ. ಇಂದಿರಾ ಗಾಂಧಿಯ ಕುತಂತ್ರಕ್ಕೆ ಯಾರಾದರೂ ಬಲಿಯಾಗಿ ಮತ್ತೆ ಕಾಂಗ್ರೆ ಸರಕಾರವನ್ನು ಕರ್ನಾಟಕದಲ್ಲಿ ಸ್ಥಾಪಿಸಲು ಪಕ್ಷಾಂತರ ಮಾಡಿದರೆ ಮಾತ್ರ ಪರಿಸ್ಥಿತಿ ಕೈ ಮೀರಿ ಹೋಗಬಹುದೆಂಬ ಎಚ್ಚರಿಕೆಯನ್ನು ಕನ್ನಡಿಗರು ಕೊಡಲಿಚ್ಛಿಸುತ್ತಾರೆ. ಈ ಕಾರಣದಿಂದಲೇ ಹಿರಿಯ ಮುಖಂಡರೂ, ಈ ಚುನಾವಣೆಯಲ್ಲಿ ನಾಲ್ಕು ಪಕ್ಷಗಳಲ್ಲಿ ಹೊಂದಾಣಿಕೆ ಬರುವಂತೆ ಮಾಡಿ, ಇಂದಿರಾ ಕಾಂಗ್ರೆಸ್ಸನ್ನು ಸೋಲಿಸುವಲ್ಲಿ ಪ್ರಮುಖ ಪಾತ್ರಧಾರಿಗಳಲ್ಲೊಬ್ಬರಾದ ಶ್ರೀ ಬಂಗಾರಪ್ಪನವರು ಹೆಚ್ಚಿನ ಜವಾಬ್ದಾರಿಯಿಂದ ಸಂಯಮದಿಂದ ವರ್ತಿಸುವುದು ಅತ್ಯಗತ್ಯವೆಂದು ಹೇಳಬೇಕಾಗಿದೆ. ಇಲ್ಲಿ ವ್ಯಕ್ತಿ ಅಥವಾ ಜಾತಿಯ ಪ್ರಶ್ನೆ ಉದ್ಭವವಾಗುವುದಿಲ್ಲ. ಚುನಾವಣೆಯ ಸಮಯದಲ್ಲಿ ನಾವು ಜನರ ಮುಂದಿಟ್ಟಿರುವ ಕಾರ್ಯಕ್ರಮಗಳ ಅನುಷ್ಠಾನದ ಪ್ರಶ್ನೆಯೇ ಪ್ರಾಧಾನ್ಯ.

ಇಂದಿರಾ ಗಾಂಧಿಯಂತೆಯೇ ಬಿ.ಜೆ.ಪಿ. ಅಧ್ಯಕ್ಷ ಸುಬ್ಬಯ್ಯನಂತವರೂ ಜನತಾ ಪಾರ್ಟಿ-ಕ್ರಾಂತಿರಂಗದ ಜನರಲ್ಲಿ ತಪ್ಪು ತಿಳುವಳಿಕೆ ಉಂಟುಮಾಡಲು ಶ್ರಮಿಸುತ್ತಿದ್ದಾರೆ. ರಾಮಕೃಷ್ಣ ಹೆಗಡೆಯವರು ಜನತಾ ಶಾಸಕಾಂಗ ಪಕ್ಷದ ಮುಖಂಡರಾಗಿ ಆರಿಸಿ ಬಂದಿರುವುದನ್ನು ಟೀಕಿಸಿದ್ದಲ್ಲದೆ, ಹಿಂದುಳಿದ ವರ್ಗಕ್ಕೆ ಸೇರಿದವರೊಬ್ಬರನ್ನು ಮುಖಂಡರನ್ನಾಗಿ ಆರಿಸಬಹುದಾಗಿತ್ತೆಂದು ಸುಬ್ಬಯ್ಯನವರು ಹೇಳಿರುವುದು ಖಂಡನೀಯ. ರಾಜಕೀಯದಲ್ಲಿ ಪಾರ್ಟಿ ಮತ್ತು ಪಾರ್ಟಿಯ ಕಾರ್ಯಕ್ರಮವೇ ಪ್ರಾಧಾನ್ಯವಲ್ಲದೆ, ಜಾತಿ, ವ್ಯಕ್ತಿ ಮಹತ್ವದ್ದಲ್ಲೆಂಬುದನ್ನು ಬಿ.ಜೆ.ಪಿ. ಮುಖಂಡ ತಿಳಿದಂತೆ ಕಂಡುಬರುವುದಿಲ್ಲ. ತಮ್ಮ ಹೇಳಿಕೆಯಿಂದ ಇಂದಿರಾ ಗಾಂಧಿಗೂ, ಬೂಟಾಸಿಂಗನಿಗೂ ಸಹಾಯವಾಗುತ್ತದೆಂಬ ವಿಷಯ ಸುಬ್ಬಯ್ಯನವರ ಬುದ್ಧಿಗೆ ಹೊಳೆಯಲಿಲ್ಲ.

ಬೂಟಾಸಿಂಗನ ಕಾಮಕ್ರೀಡೆಗೆ ಬೆಂಗಳೂರಿನಲ್ಲಿ, ಕರ್ನಾಟಕ ರಾಜ್ಯದಲ್ಲಿ ಅವಕಾಶಮಾಡಿ ಕೊಡದೆ, ಆದಷ್ಟು ಬೇಗ ಅವನನ್ನೂ ಅವನ ಸಂಗಾತಿಗಳನ್ನೂ ಓಡಿಸುವ ಕ್ರಮಕೈಗೊಳ್ಳುವುದು ಅತ್ಯಗತ್ಯ. ಎಚ್ಚೆತ್ತ ಕನ್ನಡಿಗ ಈ ಕಾರ್ಯದಲ್ಲಿ ಪ್ರವೃತ್ತನಾಗಲಿ.

●

ಪರಿಸರ

○ ನಾನೀಗ ವಯಸ್ಸಾದ ಹೆಂಗಸು. ಕನ್ನಡಕವಿಲ್ಲದೆ ಓದಲಾರೆ.

— ಶ್ರೀಮತಿ ಇಂದಿರಾ ಗಾಂಧಿ
(ಶಿವಮೊಗ್ಗ ಬಹಿರಂಗ ಸಭೆಯಲ್ಲಿ)

○ ಜನರನ್ನು ಕೆಲಕಾಲ ಮೋಸಗೊಳಿಸಬಹುದು, ಮಂಕುಬೂದಿ ಎರಚಬಹುದು. ಇಂದಿರಾ ಗಾಂಧಿ ಅವರ ಮೋಡಿ ಈಗ ಶೂನ್ಯ. ಇನ್ನು ಮುಂದೆ ಈ ಕಣ್ಣುಮುಚ್ಚಾಲೆ ನಡೆಯದು. ದಕ್ಷಿಣದ ಕರ್ನಾಟಕದಿಂದ ಪ್ರಚಂಡ ಮಾರುತ ಬೀಸತೊಡಗಿದೆ. ದಿಲ್ಲಿಯ ದರಬಾರು ಇನ್ನು ನಡುಗೀತು. ಏನನ್ನೂ ಬೇಕಾದರೂ ಮಾಡಿ ಪಾರಾಗಬಹುದೆಂಬ ನಿಸ್ಸೀಮ ಅಹಂಕಾರಕ್ಕೆ ಎಡೆಯಿಲ್ಲ.

— ಕನ್ನಡಪ್ರಭ

○ ತಮ್ಮ ಕುಪ್ರಸಿದ್ಧ ಪತ್ರಿಕಾ ವಿಧೇಯಕದ ಸಲುವಾಗಿ ಅಶ್ಲೀಲ ಭಾಷೆ ಅಥವಾ "ಭಂಡ ಭಾಷೆ" ಎಂಬುದನ್ನು ಸೂತ್ರೀಕರಿಸಲು ಜಗನ್ನಾಥ ಮಿಶ್ರಾ ಅವರಿಗೇನಾದರೂ ತೊಂದರೆಯಾಗಿದ್ದರೆ ಅವರು ಮುಹಮ್ಮದ್ ಯೂನುಸ್ ಅವರ ಸಲಹೆ ಪಡೆಯಬೇಕೆಂದು ನಾನು ಸೂಚಿಸುತ್ತೇನೆ.

— ಖುಶ್ವಂತ್ ಸಿಂಗ್ (ಮುಹಮ್ಮದ್ ಯೂನುಸ್ ಮೇನಕಾ ಗಾಂಧಿ, ಆಕೆಯ ತಾಯಿ ಬಗ್ಗೆ ಬರೆದ ನಿಂದಾತ್ಮಕ ಲೇಖನದ ಕುರಿತು) ಹಿಂದೂಸ್ತಾನ್ ಟೈಂಸ್‌ನಲ್ಲಿ.

○ ಭಾರತದಲ್ಲಿ ಜಗತ್ತಿನ ಅತಿ ದೊಡ್ಡ ಬಾಲ ಕಾರ್ಮಿಕರ ಸಂಖ್ಯೆ ಇದೆ. 1971ರಲ್ಲಿ ಇದು 70 ಮಿಲಿಯವಾಗಿತ್ತು. 5-15 ವಯಸ್ಸಿನ ಗುಂಪಿನಲ್ಲಿ 16.3 ಮಿಲಿಯ ಬಾಲ ಕಾರ್ಮಿಕರಿದ್ದಾರೆಂದು 1972-73ರ ನ್ಯಾಷನಲ್ ಸ್ಯಾಂಪಲ್ ಸರ್ವೇ ತಿಳಿಸುತ್ತದೆ.

— ಇಂಡಿಯಾ ಟುಡೆ

● ಹಳ್ಳಿಗಳಲ್ಲಿ ನಿರುದ್ಯೋಗ ಮತ್ತು ಬಡತನದ ಬಗ್ಗೆ ಸರ್ಕಾರದ ಕಳವಳ ಆದು ಗ್ರಾಮೀಣ ಅಭಿವೃದ್ಧಿ ಕಾರ್ಯಕ್ರಮಕ್ಕೆ ಆರನೇ ಯೋಜನೆಯಲ್ಲಿ ತೆಗೆದಿಟ್ಟದ್ದು 150 ಕೋಟಿ ರೂ. ಅದೇ ಸರ್ಕಾರ ಏಷ್ಯಾಡ್‌ಗೆ ನೇರವಾಗಿ ಮಾಡಿದ ಖರ್ಚು 1500 ಕೋಟಿ ರೂ. ಇದು ಏಷ್ಯಾಡ್‌ನ ಆಂತರಿಕ ಗುಣಗಳೇನೆಂತಲೂ ಸರ್ಕಾರದ ವಿಕೃತ ಒಲವುಗಳ ಸಂಕೇತ.

— ರಂಜೀತ್ ಸಾವ್ರ, ಸಂಡೇಯಲ್ಲಿ

ಅಭಿನಂದನೆ

ಉಳ್ಳಾಲ ವಿಧಾನಸಭಾ ಕ್ಷೇತ್ರದಲ್ಲಿ ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷದ ಅಭ್ಯರ್ಥಿ ಕಾಂ| ಪಿ. ರಾಮಚಂದ್ರ ರಾಯರನ್ನು ಪ್ರಚಂಡ ಬಹುಮತದಿಂದ ಆರಿಸಿದ ಮತದಾರ ಬಂಧುಭಗಿನಿಯರನ್ನು ಮಾರ್ಕ್ಸ್‌ವಾದಿಕಮ್ಯೂನಿಸ್ಟ್ ಪಕ್ಷದ ದ. ಕ. ಜಿಲ್ಲಾ ಸಮಿತಿಯ ಸೆಕ್ರೆಟರಿಯೆಟ್ ಹೃತ್ಪೂರ್ವಕವಾಗಿ ಅಭಿನಂದಿಸುತ್ತದೆ. ಪಕ್ಷದ ಸಾವಿರಾರು ಕಾರ್ಯಕರ್ತರೂ ಅಭಿಮಾನಿಗಳೂ, ಮಿತ್ರ ಪಕ್ಷಗಳಾದ ಕ್ರಾಂತಿರಂಗ, ಸಿ ಪಿ ಐ. ಮತ್ತು ಜನತಾ ಪಕ್ಷದ ಅಸಂಖ್ಯಾತ ಕಾರ್ಯಕರ್ತರೂ ಹಗಲಿರುಳೂ ದುಡಿದಿದ್ದಾರೆ. ಜಿಲ್ಲೆಯ ನಾನಾ ಭಾಗಗಳಿಂದ ನಮ್ಮ ಪಕ್ಷದ ಅನೇಕ ಅಭಿಮಾನಿಗಳೂ, ಕಾರ್ಮಿಕರು, ರೈತರು ಮತ್ತು ಇತರ ಮಹಾ ಜನರು ಹಲವಾರು ವಿಧಗಳಲ್ಲಿ ಸಹಾಯ ಮಾಡಿದ್ದಾರೆ. ಈ ಎಲ್ಲಾ ಕಾರ್ಯಕರ್ತರಿಗೂ ಮಹನೀಯರಿಗೂ ನಾವು ಹೃತ್ಪೂರ್ವಕ ಕೃತಜ್ಞತೆಗಳನ್ನು ಅರ್ಪಿಸುತ್ತೇವೆ ಎಂಬುದಾಗಿ ಕಾರ್ಯದರ್ಶಿ ಕಾಂ| ಕೆ. ಆರ್. ಶ್ರೀಯಾನ್ ಪ್ರಕಟನೆಯಲ್ಲಿ ತಿಳಿಸಿದ್ದಾರೆ.

○

ಸಿ. ಪಿ. ಐ. (ಎಂ) ಚುನಾವಣ ನಿಧಿಗೆ ಸಹಾಯ

ವಿಕ್ರಾಂತ್ ಟೈರ್ಸ್ ಕಾರ್ಮಿಕರಿಂದ (ಮೈಸೂರು)	6000-00
ಮೈಸೂರು ಕಿರ್ಲೋಸ್ಕರ್ ಕೆಲಸಗಾರರ ಸಂಘ ಹರಿಹರ	6800-00
ಕಾಂ. ಪ್ರಸನ್ನ	50-00
ಕಾಂ. ಸಿ. ವೀರಣ್ಣ	100-00
ಕಾಂ. ಕೆ. ಸುಬ್ಬರಾವ್	500-00
ಕಾಂ. ಬೈರರೆಡ್ಡಿ	2000-00
ಎನ್. ಕೆ. ಉಪಾಧ್ಯಾಯರಿಂದ	1200-00
ಎಸ್. ಎಸ್. ರಾವ್ ಅವರಿಂದ	1000-00
ಕಾಂ. ಕೆ. ಆರ್. ನಾಯಕ್, ತುಮಕೂರು	500-00
ಕಾಂ. ಎಂ. ಎಸ್. ಉಗ್ರಪ್ಪ ಮೈಸೂರು	2000-00
ಪೇಪರ್ ಮಿಲ್ ಕೆಲಸಗಾರರು ದಾಂಡೇಲಿ	600-00
ಸಿ. ನಂಜುಂಡಪ್ಪ (ಸಾಂಸ್ಕೃತಿಕ ಕೇಂದ್ರ)	100-00
ಪ್ರಭಾಕರ ಮತ್ತು ಶ್ಯಾಮ ಬಳ್ಳಾರಿ	25-00
ಕೃಷ್ಣನ್ ನಾಯರ್	10-00
ಹೊಸಪೇಟೆ ಪಾರ್ಟಿ ಶಾಖೆ	140-00
ಶಿವಮೊಗ್ಗ ಪಾರ್ಟಿ	350-00
ಸಿ. ನಂಜುಂಡಪ್ಪ	255-00
ಡಿ. ಎಮ್. ಕಲಾಸಿ ಬಾಗಲಕೋಟೆ	375-00

ಪಾಲಿಟ್‌ಬ್ಯೂರೋ ಅಭಿನಂದನೆ

ಕರ್ನಾಟಕದಲ್ಲಿ ಜನವರಿ 5 ರಂದು ನಡೆದ ಚುನಾವಣೆಯಲ್ಲಿ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಾರ್ಟಿಯ ಮೂವರು ಉಮೇದುವಾರರು ಹೆಚ್ಚಿನ ಬಹುಮತದಿಂದ ಆರಿಸಿ ಬಂದಿರುವುದಕ್ಕೆ ಹಾಗೆಯೇ ಜನತಾ, ಕ್ರಾಂತಿರಂಗ, ಸಿ. ಪಿ. ಐ. ಸಿ. ಪಿ. ಐ (ಎಂ) ಒಕ್ಕೂಟ ರಾಜ್ಯದಲ್ಲಿ ಬಹುಮತ ಪಡೆದಿರುವುದಕ್ಕೆ ಸಿ ಪಿ ಐ. (ಎಂ) ಪಾಲಿಟ್ ಬ್ಯೂರೋ ಮತ್ತು ಕೇಂದ್ರ ಸಮಿತಿ ಪರವಾಗಿ ಕಾಂ| ಬಿ. ಟಿ. ರಣದಿವೆಯವರು ಅತ್ಯಾನಂದ ವ್ಯಕ್ತಮಾಡಿ ಶುಭಾಶಯ ಕೋರಿದ್ದಾರೆ.

Printed & Published by P. Ramachandra Rao by him on behalf of the Communist Party of India (Marxist) Karnataka State Committee, L-56 K. V. Temple Street Sultanpet, Bangalore-560 053 Editorial and managerial office :L-56, K. V. Temple Street, Sultanpet, B-560 053 Phone-24154. Prited at Ravee Traders, No 8/1, J.M. Lane, Balepet Cross, Bangalore-560 053. EDITOR P. RAMACHANDRA RAO